ಸಂಪುಟ 01 । ಸಂಚಿಕೆ 140 । ಮಂಗಳವಾರ 11 ಆಗಸ್ಟ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1)National Son's and Daughter's Day (ರಾಷ್ಟ್ರೀಯ ಪುತ್ರ-ಪುತ್ರಿಯರ ದಿನ)** □ ಪೋಷಕರು ತಮ್ಮ ಮಕ್ಕಳೊಂದಿಗೆ ಸಮಯ ಕಳೆಯಲು, ಅವರ ಪ್ರೀತಿ ಮತ್ತು ಮಹತ್ವವನ್ನು ಗೌರವಿಸಲು ಈ ದಿನವನ್ನು ಆಚರಿಸಲಾಗುತ್ತದೆ.

**2)National Hip Hop Day (ರಾಷ್ಟ್ರೀಯ ಹಿಪ್-ಹಾಪ್ ದಿನ)** □ ಹಿಪ್-ಹಾಪ್ ಸಂಗೀತ ಮತ್ತು ಸಂಸ್ಕೃತಿಯ ಹುಟ್ಟನ್ನು ಸ್ಮರಿಸುವ ದಿನ. 1973ರ ಆಗಸ್ಟ್ 11ರಂದು ಬ್ರಾಂಕ್ಸ್‌ನಲ್ಲಿ ಆವಿ ಏಠಟ ಊಜಡಿಛಿ ಆಯೋಜಿಸಿದ ಪ್ರಸಿದ್ಧ ಬ್ಯಾಕ್-ಟು-ಸ್ಕೂಲ್ ಪಾರ್ಟಿಯನ್ನು ಹಿಪ್-ಹಾಪ್‌ನ ಆರಂಭಿಕ ಪ್ರಮುಖ ಘಟನೆಗಳಲ್ಲಿ ಒಂದಾಗಿ ಪರಿಗಣಿಸಲಾಗುತ್ತದೆ

## ಸುಭಾಷಿತ

ನಮ್ಮ ಹಣೆಬರಹ ನಿರ್ಧರಿಸುವವರು ನಾವೇ.
ಅದಕ್ಕಾಗಿ ಯಾರನ್ನೂ ದೂರಬಾರದು ಅಥವಾ
ಯಾರನ್ನೂ ಶ್ಲಾಘಿಸಬಾರದು.
- ಸ್ವಾಮಿ ವಿವೇಕಾನಂದ

# ಜವಳಗೇರಾ ಗ್ರಾಮದಲ್ಲಿ ನೂತನ ಬಸ್ ನಿಲ್ದಾಣದ ಕಾಮಗಾರಿ ಪರಿಶೀಲಿಸಿದ ಶಾಸಕ ಹಂಪನಗೌಡ ಬಾದರ್ಲಿ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಸಿಂಧನೂರು ವಿಧಾನಸಭಾ ಕ್ಷೇತ್ರದ ಜವಳಗೇರಾ ಗ್ರಾಮದ ಸಮಗ್ರ ಅಭಿವೃದ್ಧಿಗೆ ಮತ್ತಷ್ಟು ಆದ್ಯತೆ ನೀಡಲಾಗುತ್ತಿದ್ದು, ಗ್ರಾಮದ ಜನತೆಗೆ ಅಗತ್ಯ ಮೂಲಸೌಕರ್ಯ ಹಾಗೂ ಸಾರ್ವಜನಿಕ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು.ಜವಳಗೇರಾ ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಬಸ್ ನಿಲ್ದಾಣದ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಹಂಪನಗೌಡ ಬಾದರ್ಲಿ, ಕಾಮಗಾರಿಯ ಪ್ರಗತಿ, ನಿರ್ಮಾಣದ ಗುಣಮಟ್ಟ ಹಾಗೂ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ಕುರಿತು ಸಂಬಂಧಿಸಿದ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಂದ ಮಾಹಿತಿ ಪಡೆದುಕೊಂಡರು. ಗ್ರಾಮೀಣ ಪ್ರದೇಶಗಳ ಜನರಿಗೆ ಸುಗಮ ಹಾಗೂ ಸುರಕ್ಷಿತ ಸಾರಿಗೆ ವ್ಯವಸ್ಥೆ ಕಲ್ಪಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ನೂತನ ಬಸ್ ನಿಲ್ದಾಣ ನಿರ್ಮಾಣದಿಂದ ಜವಳಗೇರಾ ಗ್ರಾಮ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ. ವಿಶೇಷವಾಗಿ ವಿದ್ಯಾರ್ಥಿಗಳು, ಮಹಿಳೆಯರು, ವೃದ್ಧರು ಹಾಗೂ ಪ್ರತಿನಿತ್ಯ ವಿವಿಧ ಕೆಲಸಗಳಿಗಾಗಿ ಪ್ರಯಾಣಿಸುವ ಸಾರ್ವಜನಿಕರಿಗೆ ಸುರಕ್ಷಿತವಾಗಿ ಬಸ್‌ಗಾಗಿ ಕಾಯಲು ಅನುಕೂಲವಾಗಲಿದೆ ಎಂದು ಶಾಸಕರು ಹೇಳಿದರು.ಕಾಮಗಾರಿಯಲ್ಲಿ ಗುಣಮಟ್ಟಕ್ಕೆ ಯಾವುದೇ ರೀತಿಯ ರಾಜಿಯಾಗಬಾರದು. ಸಾರ್ವಜನಿಕರ ತೆರಿಗೆ ಹಣದಿಂದ ಕೈಗೊಳ್ಳುತ್ತಿರುವ ಅಭಿವೃದ್ಧಿ ಕಾಮಗಾರಿಗಳು ದೀರ್ಘಕಾಲ ಬಾಳಿಕೆ





ಬರುವಂತಿರಬೇಕು. ನಿಗದಿತ ಗುಣಮಟ್ಟ ಹಾಗೂ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಜೊತೆಗೆ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಶಾಸಕರು ಅಧಿಕಾರಿಗಳಿಗೆ ಸೂಚಿಸಿದರು.ಜವಳಗೇರಾ ಗ್ರಾಮದ ಜನರ ಬಹುದಿನಗಳ ಅಗತ್ಯಗಳನ್ನು ಹಂತ ಹಂತವಾಗಿ ಈಡೇರಿಸುವ ನಿಟ್ಟಿನಲ್ಲಿ ರಸ್ತೆ, ಕುಡಿಯುವ ನೀರು, ಚರಂಡಿ, ಸಾರಿಗೆ ಸೇರಿದಂತೆ ಅಗತ್ಯ ಮೂಲಸೌಕರ್ಯಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ. ಗ್ರಾಮಗಳ ಅಭಿವೃದ್ಧಿಯೇ ಕ್ಷೇತ್ರದ ಸಮಗ್ರ ಅಭಿವೃದ್ಧಿಯ ಪ್ರಮುಖ ಆಧಾರವಾಗಿದ್ದು, ಗ್ರಾಮೀಣ ಭಾಗದ ಜನರಿಗೆ ಉತ್ತಮ ಸೌಲಭ್ಯಗಳನ್ನು ಕಲ್ಪಿಸುವುದು ತಮ್ಮ ಪ್ರಮುಖ ಗುರಿಯಾಗಿದೆ ಎಂದು ಹಂಪನಗೌಡ ಬಾದರ್ಲಿ ತಿಳಿಸಿದರು.ಅಭಿವೃದ್ಧಿ ಕಾಮಗಾರಿಗಳ ಪ್ರಗತಿಯನ್ನು ಸ್ಥಳದಲ್ಲಿಯೇ ಪರಿಶೀಲಿಸುವ ಮೂಲಕ ಕಾಮಗಾರಿಗಳ ಗುಣಮಟ್ಟ ಮತ್ತು ವೇಗದ ಬಗ್ಗೆ ಶಾಸಕರು ಗಮನ ಹರಿಸುತ್ತಿರುವುದಕ್ಕೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದರು. ಗ್ರಾಮಕ್ಕೆ ಅಗತ್ಯವಿರುವ ಇನ್ನಷ್ಟು ಅಭಿವೃದ್ಧಿ ಕಾಮಗಾರಿಗಳ ಕುರಿತು ಗ್ರಾಮಸ್ಥರು ಶಾಸಕರ ಗಮನಕ್ಕೆ ತಂದಿದ್ದು, ಅವುಗಳನ್ನು ಹಂತ ಹಂತವಾಗಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಶಾಸಕರು ಭರವಸೆ ನೀಡಿದರು.ಈ ಸಂದರ್ಭದಲ್ಲಿ ಗ್ರಾಮದ ಮುಖಂಡರು, ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು, ಅಧಿಕಾರಿಗಳು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಸ್ಥರು ಉಪಸ್ಥಿತರಿದ್ದರು.

❑

ಜವಳಗೇರಾ ಗ್ರಾಮವು ಸುತ್ತಮುತ್ತಲಿನ ಹಲವು ಹಳ್ಳಿಗಳಿಗೆ ಪ್ರಮುಖ ಸಂಪರ್ಕ ಕೊಂಡಿಯಾಗಿದೆ. ಇಲ್ಲಿ ನೂತನ ಬಸ್ ನಿಲ್ದಾಣ ನಿರ್ಮಾಣವಾಗುತ್ತಿರುವುದರಿಂದ ಪ್ರತಿದಿನ ಸಂಚರಿಸುವ ಸಾವಿರಾರು ಪ್ರಯಾಣಿಕರಿಗೆ, ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಹಿರಿಯ ನಾಗರಿಕರಿಗೆ ಬಿಸಿಲು, ಮಳೆಯಿಂದ ರಕ್ಷಣೆ ಸಿಗಲಿದ್ದು, ದೊಡ್ಡ ಮಟ್ಟದ ಅನುಕೂಲವಾಗಲಿದ

’ – ಶಾಸಕ ಹಂಪನಗೌಡ ಬಾದರ್ಲಿ



# ಸುಂಕೇಶ್ವರಹಾಳ ಶಿಥಿಲ ಬಸ್ ನಿಲ್ದಾಣ ತೆರವುಗೊಳಿಸಿ ಹೊಸ ನಿಲ್ದಾಣ ನಿರ್ಮಿಸಿ: AIMIM ಆಗ್ರಹ

❑ ನೈಜ್ಯ ದೆಸೆ ನ್ಯೂಸ್



ದೇವದುರ್ಗ, ಆ.10: ತಾಲೂಕಿನ ಸುಂಕೇಶ್ವರಹಾಳ ಗ್ರಾಮದ ಹಳೆಯ ಹಾಗೂ ಶಿಥಿಲಾವಸ್ಥೆಯಲ್ಲಿರುವ ಬಸ್ ನಿಲ್ದಾಣವನ್ನು ತಕ್ಷಣ ತೆರವುಗೊಳಿಸಿ, ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ಹೊಸ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸಬೇಕು ಎಂದು ಆಲ್ ಇಂಡಿಯಾ ಮಜ್ಲಿಸ್-ಎ-ಇತ್ತೇಹಾದುಲ್ ಮುಸ್ಲಿಮೀನ್ (ಂಋಒಋಒ) ರಾಯಚೂರು ನಗರ ಸಮಿತಿ ಆಗ್ರಹಿಸಿದೆ.ಈ ಕುರಿತು ಸಾರಿಗೆ ಸಚಿವರು ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (ಏಖಖಖಅ) ರಾಯಚೂರು ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ.ಪ್ರಸ್ತುತ ಬಸ್ ನಿಲ್ದಾಣದ ಮೇಲ್ಛಾವಣಿ ಹಾಗೂ ಗೋಡೆಗಳು ಸಂಪೂರ್ಣ ಹಾನಿಗೊಳಗಾಗಿದ್ದು, ಯಾವುದೇ ಸಂದರ್ಭದಲ್ಲಿ ಕುಸಿದು ಬೀಳುವ ಅಪಾಯವಿದೆ. ಪ್ರತಿದಿನ ನೂರಾರು ಶಾಲಾ-ಕಾಲೇಜು ವಿದ್ಯಾರ್ಥಿಗಳು, ಮಹಿಳೆಯರು, ವೃದ್ಧರು ಸೇರಿದಂತೆ ಸಾರ್ವಜನಿಕರು ಈ ನಿಲ್ದಾಣವನ್ನು ಅವಲಂಬಿಸಿದ್ದಾರೆ. ಮಳೆ ಹಾಗೂ ಬಿಸಿಲಿನ ಸಂದರ್ಭಗಳಲ್ಲಿ ಪ್ರಯಾಣಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.ಇತ್ತೀಚೆಗೆ ದೇವದುರ್ಗ ಪಟ್ಟಣದಲ್ಲಿ ಗೋಡೆ ಕುಸಿದು ಮೂವರು ಯುವಕರು ಮೃತಪಟ್ಟಿರುವ ಘಟನೆಯನ್ನು ಮನವಿಯಲ್ಲಿ ಉಲ್ಲೇಖಿಸಿರುವ ಂಋಒಋಒ ಮುಖಂಡರು, ಇಂತಹ ಮತ್ತೊಂದು ಅನಾಹುತ ಸಂಭವಿಸುವ ಮುನ್ನವೇ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.ಶಿಥಿಲಗೊಂಡಿರುವ ಕಟ್ಟಡವನ್ನು ಕೂಡಲೇ ತೆರವುಗೊಳಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ಶೀಘ್ರ ಹೊಸ ಬಸ್ ನಿಲ್ದಾಣ ನಿರ್ಮಿಸಬೇಕು. ನಿರ್ಲಕ್ಷ್ಯದಿಂದ ಯಾವುದೇ ಅನಾಹುತ ಸಂಭವಿಸಿದರೆ ಸಂಬಂಧಿಸಿದ ಸಾರಿಗೆ ಇಲಾಖೆ ಅಧಿಕಾರಿಗಳೇ ಹೊಣೆಗಾರರಾಗಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಮನವಿ ಸಲ್ಲಿಸಿದವರುಂಋಒಋಒ ರಾಯಚೂರು ನಗರ ಅಧ್ಯಕ್ಷ ಶಬ್ಬೀರ್ ಅಹ್ಮದ್ ಹೌದಡಿ, ಪ್ರಧಾನ ಕಾರ್ಯದರ್ಶಿ ಶಹಬಾಜ್ ಖಾನ್, ಜಂಟಿ ಕಾರ್ಯದರ್ಶಿ ತನ್ವೀರ್ ಅಹ್ಮದ್ ಖಾನ್, ಮುಖಂಡ ಖಾಜಾ ಮೋಹಿನುದ್ದೀನ್, ಜಂಟಿ ಕಾರ್ಯದರ್ಶಿ ಇರ್ಫಾನ್ ಖಾನ್, ವಾರ್ಡ್ ಅಧ್ಯಕ್ಷ ಸೊಹೈಲ್ ಖುರೇಷಿ ಸೇರಿದಂತೆ ಪಕ್ಷದ ಮುಖಂಡರು ಉಪಸ್ಥಿತರಿದ್ದರು.ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ರಾಷ್ಟ್ರೀಯ ಜಂತುಹುಳು ನಿವಾರಣಾ ದಿನ ಆಚರಣೆ

❑ ನೈಜ್ಯ ದೆಸೆ ನ್ಯೂಸ್




ಸಿಂಧನೂರು : ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರ್ (ಆರ್‌ಸಿಎಚ್ ವಿಭಾಗ ) ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಸಿಂಧನೂರ ಇವರ ಸಯುಕ್ತ ಆಶ್ರಯದಲ್ಲಿ ವ್ಯಾಪ್ತಿಗೆ ಒಳಪಡುವ ಆದರ್ಶ ಕಾಲನಿಯ ವೆಂಕಟೇಶ್ವರ ನಗರದಲ್ಲಿ ಇರುವ ಆನಂದ ಪಬ್ಲಿಕ್ ಸ್ಕೂಲ್ ಸಿಂದನೂರ್ *"ರಾಷ್ಟ್ರೀಯ ಜಂತುಹುಳು* *ನಿವಾರಣಾ ದಿನ"* *ಜಂತುಹುಳು ರಹಿತ* *ಮಕ್ಕಳು* *ಆರೋಗ್ಯವಂತ* *ಮಕ್ಕಳು.* ಸಸಿಗೆ ನಿರುಣಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು ಕು. ಅದಿತಿ ಆನಂದ ಪಬ್ಲಿಕ್ ಶಾಲೆಯ ಆಡಳಿತ ಅಧಿಕಾರಿಗಳು ಸಿಂದನೂರ್ ಮುಖ್ಯ ಅತಿಥಿಗಳು. ಡಾ. ಮೇರಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಸಿಂಧನೂರು ಇವರು ಮಾತನಾಡಿ ಜಂತುಹುಳುಗಳು ಎಂದರೆ ಹೊಟ್ಟೆಯ ಹುಳುಗಳ, ಅಥವಾ ಕರುಳಿನ ಪರಾವಲಂಬಿ(ಋಟಿಣಜ-ಣಟಿಚಿಟ ತಿಂಡಿಛ / ಖಿಂಣಟಿಜ ತಿಂಡಿಛ ) ಹುಳುಗಳು ಎಂದರ್ಥ ಇವು ಮನುಷ್ಯರ ಮತ್ತು ಪ್ರಾಣಿಗಳ ಕರುಳಿನಲ್ಲಿ ಬೆಳೆಯುವ ಸಣ್ಣ ಜೀವಿಗಳು, ಇದು ಸಾಮಾನ್ಯವಾಗಿ ಮಕ್ಕಳಲ್ಲಿ ಕೆಲವೊಮ್ಮೆ ದೊಡ್ಡವರಲ್ಲಿಯೂ ಕಾಣಿಸಿಕೊಳ್ಳುವ ಒಂದು ಆರೋಗ್ಯ ಸಮಸ್ಯೆಯಾಗಿದೆ ಮಣ್ಣಿನಿಂದ ಕಲುಷಿತ ನೀರು ಅಥವಾ ಆಹಾರದಿಂದ ಇದು ದೇಹದೊಳಗೆ ಸೇರುತ್ತದೆ ಪ್ರಮುಖ ಲಕ್ಷಣಗಳು ಹೀಗಿವೆ ಹೊಟ್ಟೆ ನೋವು, ಹಾಗಾಗಿ ಹಸಿವಾಗದಿರುವುದು ಅಥವಾ ಅತಿಯಾದ ಹಸಿವು,ತೂಕ ನಷ್ಟ ಗುದದ ಬಳಿ ತುರಿಕೆ, ಸುಸ್ತು ಮತ್ತು ರಕ್ತ ಹೀನತೆ, ಜಂತುಹುಳುಗಳ ನಿವಾರಣೆಗೆ ಜಂತುಹುಳು ಮಾತ್ರೆಯನ್ನು ತಿಳಿದುಕೊಳ್ಳಬೇಕು, ಜಂತುಹುಳುಗಳನ್ನು ಹೊಂದಿರುವ ಮಕ್ಕಳ ಬಗ್ಗೆ ಈ ಅಂಶಗಳು ನಿಮಗೆ ತಿಳಿದಿ ತಿಳಿದಿವೆಯೇ ಶ್ರೀಮತಿ ಗೀತಾ ಹಿರೇಮಠ್ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್ ಇವರು ಮಾತನಾಡಿ ಅಪೌಷ್ಟಿಕತೆ ಮತ್ತು ರಕ್ತ ಹೀನತೆಯಿಂದಾಗಿ ಸದಾ ಬಳಲಿದಂತಿರುತ್ತಾರೆ ಅವರ ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಕುಂಠಿತವಾಗ ಬಲ್ಲದು ಜಂತುಹುಳು ಬಾದೆಯನ್ನ ಸುಲಭವಾಗಿ ನಿಯಂತ್ರಿಸಬಹುದು ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಿ ಬರಿಗಾಲಿನಿಂದ ನಡೆಯಬೇಡಿ ಚಪ್ಪಲಿಗಳನ್ನು ಧರಿಸಿ ಬಯಲಿನಲ್ಲಿ ಮಲವಿಸರ್ಜನೆ ಮಾಡಬೇಡಿ ಯಾವಾಗಲೂ ಸೌಚಾಲಯವನ್ನು ಬಳಸಿ ನಿಮ್ಮ ಕೈಗಳನ್ನು ವಿಶೇಷವಾಗಿ ಆಹಾರ ಸೇವಿಸುವ ಮೊದಲು ಹಾಗೂ ಶೌಚಾಲಯವನ್ನು ಬಳಸಿದ ನಂತರ ಸಾಬೂನಿನಿಂದ ತೊಳೆದುಕೊಳ್ಳಿ ಹಣ್ಣುಗಳು ಮತ್ತು ತರಕಾರಿಗಳನ್ನು ಶುದ್ಧ ನೀರಿನಿಂದ ತೊಳೆಯಿರಿ ಯಾವಾಗಲೂ ಶುದ್ಧ ನೀರನ್ನು ಕುಡಿಯಿರಿ ಮತ್ತು ಆಹಾರವನ್ನು ಮುಚ್ಚಿಡಿ ನಿಮ್ಮ ಉಗುರುಗಳನ್ನು ಸ್ವಚ್ಛವಾಗಿ ಮತ್ತು ಚಿಕ್ಕದಾಗಿ ಇರಿಸಿಕೊಳ್ಳಿ 1 ರಿಂದ 19 ವರ್ಷದ ಎಲ್ಲಾ ಮಕ್ಕಳಿಗೆ ಪರಿಣಾಮಕಾರಿ ಜಂತುಹುಳು ನಾಶಕ ಅಲ್ಬೆಂಡಜೋಲಾ (ಜಂತುಹುಳು) ಮಾತ್ರೆಯನ್ನ ರಾಜ್ಯಾದ್ಯಂತ ಎಲ್ಲಾ ಶಾಲಾ-ಕಾಲೇಜು ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ಮತ್ತು ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ವಿತರಿಸಲಾಗುವುದು ಈ ಮಾತ್ರೆಯ ಸಂಪೂರ್ಣ ಸುರಕ್ಷಿತ ಹಾಗೂ ವಿಶ್ವ ಆರೋಗ್ಯ ಸಂಸ್ಥೆಯಿಂದ ಪ್ರಮಾಣಿತವಾಗಿದೆ ರಾಷ್ಟ್ರೀಯ ಜಂತುಹುಳು ನಿವಾರಣ ದಿನದಂದು ಜಂತುಹುಳು ನಾಶಕ ಮಾತ್ರ ನೀಡದೆ ಬಾಕಿ ಇರುವ ಮಕ್ಕಳಿಗೆ ಮಾಪ -ಅಪ್ ದಿನ ಈ ಮಾತ್ರೆಯನ್ನು ಕಡ್ಡಾಯವಾಗಿ ನೀಡಬೇಕು ದಾಖಲಾಗುವ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಜಂತುಹುಳು ನಾಶಕ ಮಾತ್ರೆಯನ್ನು ಅಂಗನವಾಡಿ ಕೇಂದ್ರಗಳಲ್ಲಿ ನೀಡಲಾಗುತ್ತದೆ ಜಂತುಹುಳು ಒಂದು ಸುರಕ್ಷತಾ ಔಷಧವಾಗಿದೆ 6 ರಿಂದ 59 ತಿಂಗಳ ಶಿಶು ಮತ್ತು ಮಕ್ಕಳ ಸದೃಢ ದೇಹ ಮತ್ತು ಚುರುಕು ಬುದ್ಧಿ ಹೊಂದಲು ಪೂರಕವಾಗಿ 1 ಮಿಲಿ ಋಈಂ ಸಿರಪ್ ವಾರಕ್ಕೆ ಎರಡು ಬಾರಿ ನಂತರ ವರ್ಷಕ್ಕೆ ಎರಡು ಬಾರಿ ಜಂತುಹುಳು ಮಾತ್ರೆಯನ್ನು ನುಂಗಿಸಬಹುದು 12 ರಿಂದ 24 ತಿಂಗಳು ಮಾತ್ರ 24 ರಿಂದ 29 ತಿಂಗಳು ಮಾತ್ರ 5 ರಿಂದ 9 ವರ್ಷಗಳ ಮಕ್ಕಳ ಸದೃಢ ದೇಹ ಮತ್ತು ಚುರುಕು ಬುದ್ಧಿ ಹೊಂದಲು ಪೂರಕವಾಗಿ ಪಿಂಕ್ ಐಎ□□□ ಮಾತ್ರೆ ವಾರಕ್ಕೆ ಒಂದು 10 ರಿಂದ 19 ವರ್ಷದ ಹದಿಹರೆಯದ ಮಕ್ಕಳಿಗೆ ಒಂದು ಋಈಂ ನೀಲಿ ಮಾತ್ರೆಯನ್ನ ವಾರಕ್ಕೆ ಸಂತಾನೋತ್ಪತ್ತಿಯ ವಯಸ್ಸಿನ ಮಹಿಳೆಯರಿಗೂ ಆರೋಗ್ಯವಂತ ದೇಹ ಮತ್ತು ಸದೃಢ ಮನಸ್ಸು ಒಂದಲು ಪ್ರತಿದಿನ ಒಂದು ಋಈಂ ಕೆಂಪು ಮಾತ್ರ ಜೊತೆಗೆ ಜಂತುಗಳು ನಂಗಿಸಬೇಕು,, ಮಾತ್ರೆಯನ್ನು ಯಾವಾಗಲೂ ಅಗಿದು ನುಂಗಬೇಕು ಶುದ್ಧ ಕುಡಿಯುವ ನೀರು, ಲಭ್ಯವಿರುವಂತೆ ನೋಡಿಕೊಳ್ಳಿ ಅದರ ಪರಿಣಾಮಕತೆಯ ಗಮನಾರ್ಹವಾಗಿ ಕಡಿಮೆಯಾಗಬಹುದು ಮಾತ್ರೆಯನ್ನು ತೆಗೆದುಕೊಂಡು ನಂತರ ಕೆಲವೊಮ್ಮೆ ಮಕ್ಕಳಲ್ಲಿ ವಾಕರಿಕೆ ಸೌಮ್ಯ ಹೊಟ್ಟೆ ನೋವು ವಾಂತಿಯಾಗುವಿಕೆ ಅತಿಸಾರ ಹಾಗೂ ಬಳಕೆಯನ್ನು ಅನುಭವಿಸಬಹುದು ಅವರು ಜಂತುಹುಳುಗಳನ್ನು ಹೊಂದಿದ್ದಲ್ಲಿ ಇವುಗಳನ್ನು ನಿರೀಕ್ಷಿಸಬಹುದು ಆದ್ದರಿಂದ ಗಾಬರಿಯಾಗಬೇಡಿ ವೈದ್ಯಕೀಯ ನೆರವಿಗಾಗಿ 104 ಉಚಿತ ಆರೋಗ್ಯ ಸಹಾಯವಾಣಿಗೆ ಕರೆ ಮಾಡಿ ಹೆಚ್ಚಿನ ಮಾಹಿತಿಗಾಗಿ ನಿಮ್ಮ ಪಿಎಚ್ಸಿಉ ಆಶಾ ಅಂಗನವಾಡಿ ಕಾರ್ಯಕರ್ತರನ್ನು ಸಂಪರ್ಕಿಸಿಬೇಕು ಎಂದು ತಿಳಿಸಲಾಯಿತು.ಈ ಕಾರ್ಯಕ್ರಮದಲ್ಲಿ ಕಮಲಾ ಕಊಅಔ, ಶಾಲಾ ಮುಖ್ಯ ಗುರುಗಳು ಮಲ್ಲಿಕಾರ್ಜುನ ಅಂಗಡಿ, ನಜ್ಮಾ, ಮಲ್ಲಪ್ಪ, ಜಗದೀಶ್, ವಿನೋದ್, ಆಶಾ ಕಾರ್ಯಕರ್ತೆಯರಾದ ಅಮೃತ ಬಾಯಿ, ಕವಿತಾ, ಯಶೋದಾ, ಹುಲಿಗೆಮ್ಮ, ಗಂಗಮ್ಮ, ಮಾಶಾ ಬಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

### ನೆನಪುಗಳ ನೆರಳು

ಕಳೆದ ದಿನಗಳ ಹೆಜ್ಜೆ ಗುರುತು,
ಮನದಂಗಳದಿ ಉಳಿದಿದೆ ಇಂದು,
ಮರೆಯಬೇಕೆಂದರೂ ಮರೆಯಾಗದೆ,
ನೆನಪುಗಳು ಬರುತ್ತವೆ ಮತ್ತೆಂದು.

ನಗುವಿನ ಕ್ಷಣ, ನೋವಿನ ಮಾತು,
ಕಣ್ಣಂಚಲಿ ಮೂಡಿಸುವ ಚಿತ್ರ,
ದೂರವಾದವರ ಸವಿ ನೆನಪು,
ಮನದೊಳಗೆ ಉಳಿದಿರುವ ಮಿತ್ರ.

ಕಾಲವು ಮುಂದೆ ಸಾಗಿದರೂ,
ಹಿಂದಿನ ಪುಟ ಮುಚ್ಚುವುದಿಲ್ಲ,
ನೆನಪುಗಳ ನೆರಳು ಜೊತೆಯಾದಾಗ,
ಹೃದಯ ಎಂದಿಗೂ ಒಂಟಿಯಾಗುವುದಿಲ್ಲ.

ಮೌನದ ರಾತ್ರಿಯ ಹೊತ್ತಿನಲ್ಲಿ,
ಹಳೆಯ ನೆನಪುಗಳು ಮಾತಾಡುತ್ತವೆ,
ಕಳೆದುಹೋದ ಆ ಸುಂದರ ಕ್ಷಣ,
ಮತ್ತೊಮ್ಮೆ ಬದುಕುವಂತೆ ಮಾಡುತ್ತವೆ.

ನೆನಪುಗಳೇ ಜೀವನದ ಬುತ್ತಿ,
ಸಿಹಿ□ಕಹಿಯ ಮಧುರ ಸಂಗತಿ,
ಕಾಲ ಕಳೆದರೂ ಮಾಸದ ಬಣ್ಣ,
ಅದೇ ನಮ್ಮ ಬದುಕಿನ ನೆನಪಿನ ಕನ್ನಡಿ.

# ಸುಣಕಲ್ ಅಂಜುಮನ್ ಕಮಿಟಿಗೆ ನೂತನ ಪದಾಧಿಕಾರಿಗಳ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್



ಲಿಂಗಸೂಗೂರು: ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿ (ರಿ) ವತಿಯಿಂದ ತಾಲೂಕಿನ ಸುಣ-ಕಲ್ ಗ್ರಾಮದ ಜಾಮಿಯಾ ಮಸೀದಿಯಲ್ಲಿ ಆ.9ರಂದು ನಡೆದ ಸಭೆಯಲ್ಲಿ ಸುಣಕಲ್ ಗ್ರಾಮದ ಅಂಜುಮನ್ ಕಮಿಟಿಯ ನೂತನ ಪದಾಧಿಕಾರಿಗಳು ಹಾಗೂ ಸದಸ್ಯರನ್ನು ಸಮುದಾಯದವರ ಒಮ್ಮತದ ಅಭಿಪ್ರಾಯದ ಮೇರೆಗೆ ಆಯ್ಕೆ ಮಾಡಲಾಯಿತು.ನೂತನ ಕಮಿಟಿಯ ಗೌರವ ಅಧ್ಯಕ್ಷರಾಗಿ ಗನಿಸಾಬ್ ಮುಲ್ಲಾ, ಅಧ್ಯಕ್ಷರಾಗಿ ರಂಜಾನ್ ಸಾಬ್ ಶೇಖ್, ಉಪಾಧ್ಯಕ್ಷರಾಗಿ ಖಾಸಿಂಸಾಬ್ ಮುಲ್ಲಾ, ಪ್ರಧಾನ ಕಾರ್ಯದರ್ಶಿಯಾಗಿ ಮೌಲಾಸಾಬ್ ಮುಲ್ಲಾ ಹಾಗೂ ಖಜಾಂಚಿಯಾಗಿ ರಜಾಕ್ ಸಾಬ್ ಮುಲ್ಲಾ ಆಯ್ಕೆಯಾಗಿದ್ದಾರೆ.ಸದಸ್ಯರಾಗಿ ಖಾಸಿಂಸಾಬ್ ವಾಲಿಕಾರ, ಬುಡನಸಾಬ್ ಮುಲ್ಲಾ, ಮೈನುದ್ದಿನ್ ಮುಲ್ಲಾ, ಮಾಬೂಸಾಬ್ ಮುಲ್ಲಾ, ಮೈಬುಸಾಬ್, ಮೈನುದ್ದಿನ್ ಆನೆಹೊಸೂರು, ಫಾರೂಕ್, ಹುಸೇನ್ ಸಾಬ್ ಹಾಗೂ ಸಲೀಂ ಭಾಯಿ ಅವರನ್ನು ಆಯ್ಕೆ ಮಾಡಲಾಯಿತು.ಇದೇ ಸಂದರ್ಭದಲ್ಲಿ ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಮೈಬು ಸಾಬ್ ಮುಲ್ಲಾ, ಚಂದಾ ಸಾಬ್ ಮುಲ್ಲಾ ಹಾಗೂ ಮಾಬು ಸಾಬ್ ಮುಲ್ಲಾ ಅವರನ್ನು ಆಯ್ಕೆ ಮಾಡಲಾಯಿತು.ಸಭೆಯಲ್ಲಿ ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿಯ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ನೂತನವಾಗಿ ಆಯ್ಕೆಯಾದ ಸುಣಕಲ್ ಗ್ರಾಮದ ಅಂಜುಮನ್ ಕಮಿಟಿಯ ಪದಾಧಿಕಾರಿಗಳು ಹಾಗೂ ಸದಸ್ಯರು, ಸಮುದಾಯದ ಗುರು-ಹಿರಿಯರು ಮತ್ತು ಸಹೋದರರು ಉಪಸ್ಥಿತರಿದ್ದರು.ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳು ಹಾಗೂ ಸದಸ್ಯರಿಗೆ ಸಭೆಯಲ್ಲಿ ಶುಭ ಹಾರೈಸಲಾಯಿತು.

# 'ಸ್ವಾವಲಂಬಿ ಸಾರಥಿ' ಯೋಜನೆಯಡಿ ಶಂಕರ ಟಿ. ಅವರಿಗೆ ವಾಹನ ವಿತರಣೆ

❑ ನೈಜ್ಯ ದೆಸೆ ನ್ಯೂಸ್




ಸಿಂಧನೂರು: ಬಡವರು ಹಾಗೂ ಯುವಕರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸರ್ಕಾರದ ಜನಪರ ಯೋಜನೆಗಳು ಸಹಕಾರಿಯಾಗಬೇಕು ಎಂದು ವಿಧಾನಪರಿಷತ್ ಶಾಸಕ ಬಸನಗೌಡ ಬಾದರ್ಲಿ ಹೇಳಿದರು.ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ 'ಸ್ವಾವಲಂಬಿ ಸಾರಥಿ' ಯೋಜನೆಯಡಿ ಫಲಾನುಭವಿ ಶಂಕರ ಟಿ. ಅವ-ರಿಗೆ ನಿನ್ನೆ ಸಂಜೆ ವಿಧಾನಪರಿಷತ್ ಶಾಸಕರ ಸರ್ಕಾರಿ ಕಚೇರಿ ಆವರಣದಲ್ಲಿ ವಾಹನವನ್ನು ವಿತರಿಸಿ ಅವರು ಮಾತನಾಡಿದರು.ಸ್ವಂತ ಉದ್ಯೋಗದ ಮೂಲಕ ಆರ್ಥಿಕವಾಗಿ ಸಬಲರಾಗಲು ಹಾಗೂ ಕುಟುಂಬದ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಸರ್ಕಾರದ ಇಂತಹ ಯೋಜನೆಗಳು ನೆರವಾಗುತ್ತವೆ. ಅರ್ಹ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯಗಳು ತಲುಪಿದಾಗ ಮಾತ್ರ ಸರ್ಕಾರದ ಜನಪರ ಕಾರ್ಯಕ್ರಮಗಳ ಉದ್ದೇಶ ಸಾರ್ಥಕವಾಗುತ್ತದೆ ಎಂದು ತಿಳಿಸಿದರು.ಒಂದು ವಾಹನವು ಒಂದು ಕುಟುಂಬಕ್ಕೆ ಉದ್ಯೋಗದ ಅವಕಾಶ ಕಲ್ಪಿಸುವುದರ ಜೊತೆಗೆ ಸ್ವಾವಲಂಬಿ ಬದುಕಿಗೆ ಹೊಸ ದಾರಿ ತೋರಿಸುತ್ತದೆ ಎಂದು ಅವರು ಹೇಳಿದರು.ಈ ಸಂದರ್ಭದಲ್ಲಿ ಶಂಕರ ಟಿ. ಅವರಿಗೆ ಅಭಿನಂದನೆ



ಸಲ್ಲಿಸಿ, ವಾಹನವು ಅವರ ಸ್ವಂತ ಉದ್ಯೋಗಕ್ಕೆ ಉತ್ತಮ ಆದಾಯದ ಮೂಲವಾಗಿ, ಕುಟುಂಬದ ಆರ್ಥಿಕ ಪ್ರಗತಿಗೆ ಸಹಕಾರಿಯಾಗಲಿ ಎಂದು ಶುಭ ಹಾರೈಸಲಾಯಿತು.ಕಾರ್ಯಕ್ರಮದಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದರು.

## ನಾಗಲಾಪೂರ ವಿದ್ಯುತ್ ಕೇಂದ್ರದ ನಿರ್ವಹಣೆ ಕಾಮಗಾರಿ, ಮೆದಿಕಿನಾಳ ಮಾರ್ಗದ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

❑ ನೈಜ್ಯ ದೆಸೆ ನ್ಯೂಸ್




ಮಸ್ಕಿ : ನಾಗಲಾಪೂರ 33 ಕೆ.ವಿ. ವಿದ್ಯುತ್ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಆ.11ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ಮೆದಿಕಿನಾಳ ಮಾರ್ಗದ ವಿದ್ಯುತ್ ಸರಬರಾಜು ಸ್ಥಗಿತಗೊಳ್ಳಲಿದೆ.ನಾಗಲಾಪೂರ ವಿದ್ಯುತ್ ಕೇಂದ್ರದ ಮಾರ್ಗದ ಮೆದಿಕಿನಾಳ ಸೇರಿದಂತೆ 11 ಕೆ.ವಿ. ಫೀಡರ್‌ಗಳಲ್ಲಿ ಈ ಅವಧಿಯಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಜೆಸ್ಕಾಂನ ಅಂಗಸುಗೂರು ಕಾರ್ಯ ಮತ್ತು ಪಾಲನೆ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.ವಿದ್ಯುತ್ ನಿರ್ವಹಣೆ ಕಾಮಗಾರಿಗೆ ಗ್ರಾಹಕರು ಸಹಕ-ರಿಸುವಂತೆ ಜೆಸ್ಕಾಂ ಇಲಾಖೆಯ ಅಧಿಕಾರಿಗಳು ಮನವಿ ಮಾಡಿದೆ.

# ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮ ಯಶಸ್ವಿ ಚಾಲನೆ

❑ ನೈಜ್ಯ ದೆಸೆ ನ್ಯೂಸ್

ಜವಳಗೇರಾ ಆಗಸ್ಟ್ 10: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಇವರ ಸಂಯುಕ್ತ ಆಶ್ರಯದಲ್ಲಿ ಅರಗಿನ ಮರ ಕ್ಯಾಂಪ್ ಪುನರ್ವಸತಿ ಕೇಂದ್ರದಲ್ಲಿ ಜಂತುಹುಳುಗಳಿಂದ ಉಂಟಾಗುವ ಅನಾರೋಗ್ಯ ಸಮಸ್ಯೆಗಳನ್ನು ತಡೆಗಟ್ಟುವ ಉದ್ದೇಶದಿಂದ ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮವನ್ನು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು ಉದ್ಘಾಟಿಸಿ ಮಾತನಾಡಿದರು. ಮಾತನಾಡಿದ ಅವರು, ಜಂತುಹುಳುಗಳು ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ.



ಇದರಿಂದ ರಕ್ತಹೀನತೆ, ಅಪೌಷ್ಟಿಕತೆ ಹಾಗೂ ಕಲಿಕಾ ಸಾಮರ್ಥ್ಯ ಕುಂಠಿತವಾಗುವಂತಹ ಸಮಸ್ಯೆಗಳು ಉಂಟಾಗಬಹುದು. ಆದ್ದರಿಂದ ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮದಡಿ ಪ್ರತಿಯೊಬ್ಬ ಅರ್ಹ ಮಗುವಿಗೂ ಜಂತುಹುಳು ನಿವಾರಣಾ ಮಾತ್ರೆ ನೀಡುವುದು ಅತ್ಯಂತ ಅಗತ್ಯವಾಗಿದೆ ಎಂದು ತಿಳಿಸಿದರು. ಪೋಷಕರು ತಮ್ಮ ಮಕ್ಕಳಿಗೆ ತಪ್ಪದೇ ಮಾತ್ರೆ ಸೇವನೆ ಮಾಡಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು. ಕಾರ್ಯಕ್ರಮದ ಅಂಗವಾಗಿ ಮಾತನಾಡಿದ ಅಂಗನವಾಡಿ ಕಾರ್ಯಕರ್ತೆ ಆದಿಲಕ್ಷ್ಮಿ, ಮಕ್ಕಳಲ್ಲಿ ಜಂತುಹುಳು ಸೋಂಕು ತಡೆಗಟ್ಟಲು ವೈಯಕ್ತಿಕ ಸ್ವಚ್ಛತೆ, ಶುದ್ಧ ಕುಡಿಯುವ ನೀರಿನ ಬಳಕೆ, ಆಹಾರ ಸೇವಿಸುವ ಮೊದಲು ಕೈ ತೊಳೆಯುವುದು ಹಾಗೂ ಶೌಚಾಲಯದ ಬಳಕೆಯ ಮಹತ್ವವನ್ನು ವಿವರಿಸಿದರು. ಜಂತುಹುಳು ನಿವಾರಣಾ ಮಾತ್ರೆ ಸೇವನೆಯಿಂದ ಮಕ್ಕಳ ಆರೋಗ್ಯ ಸುಧಾರಣೆಗೊಂಡು ಉತ್ತಮ ಬೆಳವಣಿಗೆ ಸಾಧ್ಯವಾಗುತ್ತದೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿ ಮಹೇಶ ಅವರು ಕಾರ್ಯಕ್ರಮದ ಕುರಿತು ಮಾಹಿತಿ ನೀಡಿ, ಆರೋಗ್ಯ ಇಲಾಖೆಯು ಮಕ್ಕಳ ಆರೋಗ್ಯ ಕಾಪಾಡಲು ವಿವಿಧ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುತ್ತಿದ್ದು, ಸಾರ್ವಜನಿಕರು ಆರೋಗ್ಯ ಇಲಾಖೆಯೊಂದಿಗೆ ಸಹಕರಿಸಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆ ಲಕ್ಷ್ಮಿ, ತಾಯಂದಿರು, ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ಮಕ್ಕಳಿಗೆ ಜಂತುಹುಳು ನಿವಾರಣಾ ಮಾತ್ರೆ ವಿತರಿಸಲಾಯಿತು ಹಾಗೂ ಆರೋಗ್ಯ ಜಾಗೃತಿ ಮೂಡಿಸಲಾಯಿತು.

## ಶಿಕ್ಷಣ, ಸಂಘಟನೆ, ಹೋರಾಟವೆಂಬು ಮೂರು ಸೂತ್ರಗಳನ್ನ ಅಳವಡಿಸಿಕೊಳ್ಳಿ : ಡಾ.ರಮೇಶ ಚಕ್ರವರ್ತಿ

❑ ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ಶಿಕ್ಷಣ, ಸಂಘಟನೆ, ಹೋರಾಟವೆಂಬು ಮೂರು ಸೂತ್ರಗಳ ಅಡಿಯಲ್ಲಿ ಮುನ್ನುಗ್ಗಿದಾಗ ಮಾತ್ರ ಸರ್ಕಾರದ ಯೋಜನೆಗಳನ್ನು ಪಡೆದು, ಉತ್ತಮ ಜೀವನ ನಡೆಸಲು ಸಾಧ್ಯ ಎಂದು ಜಾಂಭವ ಯುವ ಸೇನಾ ರಾಜ್ಯಾಧ್ಯಕ್ಷ ಡಾ.ರಮೇಶ ಚಕ್ರವರ್ತಿ ಅಭಿಪ್ರಾಯ ವ್ಯಕ್ತಪಡಿಸಿದರು. ಪಟ್ಟಣದ ಮಾರುತಿ ನಗರದ ಸಮುದಾಯ ಭವನದಲ್ಲಿ ಜಾಂಭವ ಯುವ ಸೇನಾ ತಾಲೂಕು ಘಟಕ ಉದ್ಘಾಟಿಸಿ ಮಾತನಾಡಿ, ಸ್ವಾತಂ ದೊರೆತು 8 ದಶಕಗಳಾದರೂ ದಲಿತರಿಗೆ ಸಾಮಾಜಿಕ, ರಾಜ-ಕೀಯ ಸಮಾನತೆ ಮ-ರೀಚಿಕೆಯಾಗಿದೆ. ಸರ್ಕಾರಿ ಹುದ್ದೆಗಳು ಖಾಲಿ ಇದ್ದು, ಭರ್ತಿ ಮಾಡಲು ನಿಗಮಗಳಿಂದ ಅರ್ಹ ಫಲಾನುಭವಿಗಳಿಗೆ ಯೋಜನೆ ತಲುಪಿಸಲು ಸರ್ಕಾರ ನಿಗಾವಹಿಸಬೇಕಿದೆ. ದಲಿತರು ಆರ್ಥಿಕ ಸದೃಢರಾದರೆ ಮಾತ್ರ ಅಗತ್ಯ ಸೌಲಭ್ಯ ಪಡೆಯಲು ಸಾಧ್ಯ ಎಂದರು. ಜಿಲ್ಲಾಧ್ಯಕ್ಷ ಸೀಕ್ಲಿ ಸೋಮಶೇಖರ ಮಾತನಾಡಿ, ಹೋರಾಟದ ಮೂಲಕ ಸರ್ಕಾರದ ಪ್ರತಿಯೊಂದು ಯೋಜನೆಗಳನ್ನು ಪಡೆಯಲು ಸಾಧ್ಯ. ದಲಿತ ದೌರ್ಜನ್ಯಗಳ ವಿರುದ್ಧ ಹೋರಾಡಲು, ಸರ್ಕಾರಿ ಯೋಜನೆಗಳನ್ನು ದಲಿತರಿಗೆ ತಲುಪಿಸಲು ಜಾಂಭವ ಯುವ ಸೇನೆ ಪದಾಧಿಕಾರಿಗಳು ಸದಾ ಸಿದ್ಧರಿರಬೇಕು. ಮಕ್ಕಳಿಗೆ ಉನ್ನತ ಶಿಕ್ಷಣ ಹಾಗೂ ಹುದ್ದೆ ದೊರಕಿಸಲು ಪಾಲಕರು ಜಾಗೃತರಾಗಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ತಿಪ್ಪೇಸ್ವಾಮಿ, ಹೊಸಪೇಟೆ ತಾಲೂಕು ಅಧ್ಯಕ್ಷ ರುದ್ರಪ್ಪ, ಪದಾಧಿಕಾರಿಗಳಾದ ಗಂಗಾಧರ, ನೆಟ್ಟಕಲ್ಲಪ್ಪ, ಶಾಂತಪ್ಪ ಪೂಜಾರಿ, ಗಂಗಣ್ಣ, ಗುರುವಪ್ಪ, ಕರಡಿ ನೀಲಪ್ಪ, ರಾಮಾಲೆಪ್ಪ, ಕುಮಾರಿ, ಮಾರೇಶ, ಅಂಬ-ರೀಷ, ಪಾರ್ವತಿ, ರಾಜಮ್ಮ ಇತರರಿದ್ದರು.ವರದಿ : ಜಿಲಾನಸಾಬ್ ಬಡಿಗೇರ್

### ಜ್ಞಾನವೇ ಮನುಷ್ಯನನ್ನು ಕಾಪಾಡುವ ನಿಜವಾದ ಸಂಪತ್ತು : ಡಾ. ಸೈಯದ್ ಜೈನುಲ್ ಆಭಿದೀನ್ ಖಾದ್ರಿ

## ಪ್ರತಿಭಾ ಪುರಸ್ಕಾರ ಹಾಗೂ ಬಹುಮಾನ ವಿತರಣಾ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ಜ್ಞಾನವೇ ಮನುಷ್ಯನನ್ನು ಕಾಪಾಡುವ ನಿಜವಾದ ಸಂಪತ್ತು" ಎಂದು ಮಾರ್ಗದರ್ಶನ ನೀಡಿದರು. ಇಸ್ಲಾಂ ಧರ್ಮವು ಅಕ್ಷರ ಕಲಿಯುವ ಮತ್ತು ಕಲಿಸುವ ಕಾರ್ಯವನ್ನು ಪುಣ್ಯದಾಯಕವೆಂದು ಪರಿಗಣಿಸುತ್ತದೆ ಎಂದು ಬಳ್ಳಾರಿಯ ಜಮಾಅತೆ ಇಸ್ಲಾಮೀ ಹಿಂದ್ ಬಳ್ಳಾರಿ ಜಿಲ್ಲಾಧ್ಯಕ್ಷ ಡಾ. ಸೈಯದ್ ಜೈನುಲ್ ಆಭಿದೀನ್ ಖಾದ್ರಿ ಅವರು ಅಭಿಪ್ರಾಯಪಟ್ಟರು. ಅವರು ಬೋರ್ಡ್ ಆಫ್ ಇಸ್ಲಾಮಿಕ್ ಎಜು ಕೇಶನ್, ಕಂಪ್ಲಿ ಘಟಕದ ವತಿಯಿಂದ ಪಟ್ಟಣದ ವಿವೇಕಾನಂದ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಹಾಗೂ ಬಹುಮಾನ ವಿತರಣಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕಂಪ್ಲಿಯ ಅಂಜುಮನ್ ಖೀದ್ಮತೆ ಎ - ಇಸ್ಲಾಂ ಸಂಸ್ಥೆಯ ಅಧ್ಯಕ್ಷ ಅಬ್ದುಲ್ ಕರೀಂ ಲಡ್ಡು ಮಾತನಾಡಿ, "ಜ್ಞಾನವು ಬೆಳಕಾಗಿದ್ದು, ಅದು ಅಂಧಕಾರವನ್ನು ಮತ್ತು ಅಜ್ಞಾನವನ್ನು ತೊಲಗಿಸುತ್ತದೆ. ದೇವರ ಶ್ರೇಷ್ಠದಾಸರು ಹೆಚ್ಚು ಕಲಿಯುವವರಾಗಿರುತ್ತಾರೆ" ಯುವಕರು ಎಂದು ಹೇಳಿದರು.ಅತಿಥಿಗಳಾದ ಅಂಜುಮನ್ ಖೀದ್ಮತೆ ಎ - ಇಸ್ಲಾಂ ಸಂಸ್ಥೆಯ ಸಂಸ್ಥೆಯ ಕಾರ್ಯದರ್ಶಿ ಜಾಹೀರ್ ಉಡೆಗಲ್, ಕಂಪ್ಲಿ ಹಾರ್ಡ್ ವೇರ್ ನ ಮಾಲೀಕರಾದ ಎಸ್. ಕೆ. ಇಂತೀಯಾಜ್ ವೇದಿಕೆ ಮೇಲಿದ್ದು ಮಾತನಾಡಿದರು. ಜಮಾಅತೆ ಇಸ್ಲಾಮೀ ಹಿಂದ್. ಕಂಪ್ಲಿಯ ಸ್ಥಾನೀಯ ಅಧ್ಯಕ್ಷರಾದ ವಾಸಿಮ್ ಫಯಾಜ್ ಅವರು ಪ್ರಾಸ್ತಾವಿಕ ಭಾಷಣದಲ್ಲಿ ಬೋರ್ಡ್ ಆಫ್ ಇಸ್ಲಾಮಿಕ್ ಎಜು ಕೇಶನ್ ಬಗ್ಗೆ ಪರಿಚಯ ಮಾಡಿದರು. ಈ ಸಂದರ್ಭದಲ್ಲಿ ಶ್ವೇತಾ ಕಂಬತ್, ಉಮಾ ಕೊಲ್ಕರ್, ವರ್ಷಾ ಮಂಜುಮದಾರ್, ಜೆ. ಅಕ್ಷತಾ, ಗೌಸಿಯಾ, ಜಯಶ್ರೀ ಕೊಲ್ಕರ್, ಸುನೀತಾ ಮಠದ, ಸರ್ಮಸಬೀ ಸೇರಿದಂತೆ ವಿದ್ಯಾರ್ಥಿಗಳು, ಪಾಲಕರು ಹಾಜರಿದ್ದರು. ಬಿ. ಜಿಲಾನ್ ಸಾಬ್ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು. ವರದಿ : ಜಿಲಾನಸಾಬ್ ಬಡಿಗೇರ್

## ನೇಮಕಾತಿ ಪ್ರಕಟಣೆ

**DRDO ADA ನೇಮಕಾತಿ 2026 □ 111 'ಪ್ರಾಜೆಕ್ಟ್ ಅಸಿಸ್ಟೆಂಟ್–ಖ' ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ**
**7 ಆಗಸ್ಟ್ 2026**
**DRDO ADA ನೇಮಕಾತಿ 2026: 111 'ಪ್ರಾಜೆಕ್ಟ್ ಅಸಿಸ್ಟೆಂಟ್–I' ಹುದ್ದೆಗಳಿಗೆ ಅರ್ಜಿ ಸಲ್ಲಿಸಿ.** ಆRDO ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿಯು (ADA) ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ 'ಪ್ರಾಜೆಕ್ಟ್ ಅಸಿಸ್ಟೆಂಟ್–ಖ' ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ (ಕರ್ನಾಟಕ ಸರ್ಕಾರ) ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 13–ಆಗಸ್ಟ್–2026 ರೊಳಗೆ ಅಥ–'ವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: drdo.gov.in

## ಕಾಲುವೆ ಬೊಂಗಾ ಸ್ಥಳಕ್ಕೆ ಬೋಸರಾಜು ಭೇಟಿ

❑ ನೈಜ್ಯ ದೆಸೆ ನ್ಯೂಸ್





ಕವಿತಾಳ : ಪಟ್ಟಣ ಸಮಿಪದ ಗೂಗೇಬಾಳ ಗ್ರಾಮದ ಹತ್ತಿರ ತುಂಗಭದ್ರಾ ಎಡದಂಡೆ ಕಾಲುವೆಯ 84ನೇ ಮೈಲ್‌ನಲ್ಲಿ ದೊಡ್ಡ ಗಾತ್ರದ ಬೋಂಗಾ ಬಿದ್ದಿದ್ದು ಸ್ಥಳಕ್ಕೆ ವಿಧಾನ ಪರಿಷತ್ ಸದಸ್ಯ ಎನ್. ಎಸ್. ಬೋಸರಾಜು ಭೇಟಿ ನೀಡಿ ಪರಿಶೀಲಿಸಿದರು.'ತುಂಭದ್ರಾ ಎಡದಂಡೆ ಉಪಕಾಲುವೆ 66.71ರ ಶೆಟರ್ ತುಕ್ಕು ಹಿಡಿದು ಸಂಪೂರ್ಣ ಹಾಳಾಗಿದ್ದು ಕೂಡಲೇ ದುರಸ್ತಿ ಮಾಡುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು. ಭತ್ತ ನಾಟಿ ಸೇರಿ ಕೃಷಿ ಚಟುವಟಿಕೆಗಳಿಗೆ ನೀರು ಹರಿಸುವ ಕುರಿತು ಆ11ರಂದು ಮುನಿರಾಬಾದ್ ಕಾಡ ಕಚೇರಿಯಲ್ಲಿ ನಿರಾವರಿ ಸಲಹಾ ಸಮಿತಿ ಸಭೆ ಕರೆಯಲಾಗಿದ್ದು ಅಂದು ರೈತರ ಸಮಸ್ಯೆಗಳ ಕುರಿತು ಚರ್ಚಿಸಲಾಗುವುದು ಹಾಗೂ ಸರ್ಕಾರ ರೈತರ ಪರವಾಗಿದ್ದು ರೈತರಿಗೆ ಯಾವುದೇ ತೊಂದರೆಯಾಗದಂತೆ ನೀರು ನಿರ್ವಹಣೆ ಕುರಿತು ಜಲ ಸಂಪನ್ಮೂಲ ಇಲಾಖೆಯ ಅಧಿಕಾರಿಗಳಿಗೆ ಈಗಾಗಲೇ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ 'ಎಂದರು. ಈ ಸಂದರ್ಭದಲ್ಲಿ ಮಾನ್ವಿ ಶಾಸಕ ಜಿ.ಹಂಪಯ್ಯನಾಯಕ್, ಚುಕ್ಕಿಸೂಗಪ್ಪಸಾಹುಕಾರ್,ಜಿಲ್ಲಾಪಂಚಾಯತ್ ಮಾಜಿ ಸದಸ್ಯರಾದ ಕಿರಿಲಿಂಗ್ಗಪ, ಮಾಳಪ್ಪ ತೋಳ, ಮುಖಂಡರಾದ ಗಂಗಪ್ಪ ದಿನ್ನಿ, ಶಿವಣ್ಣ ವಕೀಲ, ರಾಜೇಶ್ ಬನ್ನಿಗಿಡ, ಅಯ್ಯಪ್ಪ ನಿಲೋಗಲ್, ಶಿವಣ್ಣದಿನ್ನಿ, ಮೌನೇಶಕೊಡ್ಲಿ ಸೇರಿದಮತೆ ಇನ್ನಿತರರು ಇದ್ದರು.

## ರಸ್ತೆ ಕಾಮಗಾರಿಗೆ ಭೂಮಿ ಪೂಜೆ–ಬೋಸರಾಜು

❑ ನೈಜ್ಯ ದೆಸೆ ನ್ಯೂಸ್



ಕವಿತಾಳ : ಪಟ್ಟಣ ಪಂಚಾಯತಿ ವ್ಯಾಪ್ತಿಯ ಗಂಗಾನಗರ ಕ್ಯಾಂಪ್ ನಿಂದ ನಾರಾಯಣಶೆಟ್ಟಿ ಕ್ಯಾಂಪ್ ವರಗೆಗಿನ ರಸ್ತೆ ಡಾಂಬರೀಕರಣ ಕಾಮಗಾರಿಗೆ ಇಂದು ವಿಧಾನ ಪರಿಷತ್ ಸದಸ್ಯ ಎನ್ ಎಸ್.ಬೋಸರಾಜು ಹಾಗೂ ಮಾನ್ವಿ ಶಾಸಕ ಜಿ.ಹಂಪಯ್ಯ ನಾಯಕ್ ಭೂಮಿ ಪೂಜೆ ನೆರವೇರಿಸಿದರು.ನಂತರ ವಿಧಾನ ಪರಿಷತ್ ಸದಸ್ಯ ಎನ್.ಎಸ್. ಬೋಸರಾಜು ಮಾತನಾಡಿ ನಮ್ಮ ಮಾನ್ವಿ ಶಾಸಕರು ಕ್ಷೇತ್ರ ಅಭೀವೃದ್ಧಿಗಾಗಿ ಹಲವಾರು ಯೋಜನಗಳ ಮೂಲಕ ಕ್ಷೇತ್ರದಾದ್ಯಂತ ರಸ್ತೆ, ಶಾಲಾ ಕೊಠಡಿಗಳು, ಶಾದಿಮಹಲ್, ದೇವಸ್ಥಾನ ಸೇರಿದಂತೆ ಇನ್ನಿತರ ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಂಡಿದ್ದು ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಮುಂದಾಗಿದ್ದಾರೆ ಎಂದರು.ಅವರು ತಂದಿರುವ ಯೋಜನೆಗಳ ಕಾಮಗಾ–ರಿಗಳಲ್ಲಿ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ಹಾಗೂ ಶೀಘ್ರವೇ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಮತ್ತು ಅಧಿಕಾರಿಗಳಿಗೆ ಸೂಚಿಸಿದರು.ಶಾಸಕ ಜಿ. ಹಂಪಯ್ಯನಾಯಕ್ ಮಾತನಾಡಿದರು,ಈ ಸಂದರ್ಭದಲ್ಲಿ ಈದಲ್ ವೆಂಕಟರಾವ್, ವೆಂಕಟರಾವ್ ದಾವಣಗೇರಿ, ಸೂಗಪ್ಪ ಚುಕ್ಕಿ ಸಿರವಾರ, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಕಿರಿಲಿಂಗಪ್ಪ, ಮಾಳಪ್ಪ ತೋಳ, ಯಲ್ಲಪ್ಪ ಹಿರೇದಿನ್ನಿ, ಸುರೇಶ ರಡ್ಡಿ ಸೇರಿದಂತೆ ಇನ್ನಿತರ ಮುಖಂಡರು ಉಪಸ್ಥಿತರಿದ್ದರು.

# ಕಲುಷಿತವಾದ ಐತಿಹಾಸಿಕ ದರೋಜಿ ಕೆರೆ ಸಂರಕ್ಷಿಸಿ, ಉಳಿಸುವಂತೆ ಆಗ್ರಹ

❑ ನೈಜ್ಯ ದೆಸೆ ನ್ಯೂಸ್



ಬಳ್ಳಾರಿ /ಕಂಪ್ಲಿ : ಐತಿಹಾಸಿಕ ದರೋಜಿ ಕೆರೆ ಸಂರಕ್ಷಿಸಬೇಕೆಂದು ಆಗ್ರಹಿಸಿ, ದಲಿತ್ ಪ್ಯಾಂರ್ಸ್ ಆಫ್ ಇಂಡಿಯಾ ಬಳ್ಳಾರಿ ಜಿಲ್ಲಾ ಘಟಕ ಮತ್ತು ಸಮಾಜ ಸೇವಾ ಕಾರ್ಯಕರ್ಯರ ವೇದಿಕೆ ಮುಖಾಂತರ ಸಮೀಪದ ಹೊಸ ದರೋಜಿ ಗ್ರಾಮದ ಗ್ರಾಮ ಪಂಚಾಯಿತಿಯಲ್ಲಿ ಸಂಸದ ಈ.ತುಕಾರಂ ಅವರಿಗೆ ಬರೆದಂತಹ ಮವಿ ಪತ್ರವನ್ನು ಕಾರ್ಯದರ್ಶಿ ಕೆ.ರುದ್ರಪ್ಪ ಇವರಿಗೆ ಸೋಮವಾರ ಸಲ್ಲಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿ.ನಾಗರಾಜ ಭೋವಿ ಮಾತನಾಡಿ, ಈ ಭಾಗದ ರೈತರ ಹಿತದೃಷ್ಠಿಯಿಂದ ಹಾಗೂ ಜನ ಜಾನುವಾರುಗಳಿಗೆ ನೀರುಣಿಸುವ ಹಿನ್ನಲೆ ಹಲವು ದಶಕಗಳ ಹಿಂದೆ ಟಿಪ್ಪು ಸುಲ್ತಾನ್ ಇವರು ದರೋಜಿ ಕೆರೆ ನಿರ್ಮಿಸಿದ್ದಾರೆ. ಈ ಕೆರೆಯು ಎರಡೂವರೆ ಮೈಲು ಉದ್ಯವಿದ್ದು, 45 ಅಡಿ ಎತ್ತರವಿದು ವಿಹಂಗನ ನೋಟವನ್ನುಂಟು ಮಾಡಿದೆ. ಜಿಲ್ಲೆಯ ದೊಡ್ಡ ಕೆರೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕೆರೆ ಪ್ರದೇಶ ಸುಮಾರು ಉದ್ದ 3.600 ಕಿ.ಮೀ.ನಷ್ಟು ಉದ್ದವಿದೆ. ಕೆರೆಯು ಸುಮಾರು 4.47 ಮೀಟರ್ ಅಗಲ, ಕೆರೆ ಕೋಡಿ ಉದ್ದ ಸುಮಾರು 136.20 ಮೀಟರ್‌ನಷ್ಠಿದೆ. ಗರಿಷ್ಠ 1511 ಅಡಿಯಷ್ಟು ನೀರಿನ ಮಟ್ಟ ಹೊಂದಿದೆ. ಇಲ್ಲಿನ 10 ಗ್ರಾಮಗಳ ಸುಮಾರು 3222 ಎಕರೆ ಪ್ರದೇಶಕ್ಕೆ ನೀರೊದಸಲಿದೆ. ಆದರೆ, ಈಗ ಜಿಂದಾಲ್ ಉಕ್ಕು ಕಾರ್ಖಾನೆ ಸೇರಿದಂತೆ ಇನ್ನಿತರ ಕಾರ್ಖಾನೆಗಳ ಕಲುಷಿತ ನೀರು, ಇಲ್ಲಿನ ಕೆರೆಗೆ ಸೇರ್ಪಡೆಯಿಂದಾಗಿ ಜಲ ಮಾಲಿನ್ಯವಾಗಿದೆ. ಮತ್ತು ಈ ಕುಲುಷಿತ ನೀರಿನಿಂದಾಗಿ ರೈತರಿಗೆ, ಕೃಷಿ ಕಾರ್ಮಿಕರಿಗೆ ಚರ್ಮದ ರೋಗದ ಜೊತೆಗೆ ಜಾನುವಾರು, ಪಕ್ಷಿಗೆ ಜೀವ ಕಂಟಕವಾಗಿದೆ. ಹಾಗೂ ಮೀನುಗಾರಿಕೆಗೆ ಮತ್ತು ಜೀವಿಸುವ ಮೀನುಗಳ ಬದುಕಿಗೆ ವಿಷ ಉಣಿಸುವಂತಾಗಿದೆ. ಮೀನುಗಳು ರೋಗಗ್ರಸ್ತವಾಗಿ ಸಾಯುತ್ತಿದ್ದು, ಮೀನುಗಾ–ರಿಕೆ ಗುತ್ತಿಗೆದಾರರು, ಮೀನು ಬೇಟೆಗಾರರು ನಷ ಅನುಭವಿಸುತ್ತಿದ್ದಾರೆ. ಇಲ್ಲಿನ ಕೆರೆಯಲ್ಲಿ ಕಲುಷಿತ ಸೇರುತ್ತಿದ್ದರೂ, ಸಂಬಂಧಿಸಿದ ಅಧಿಕಾರಿಗಳು ಮಾತ್ರ ಮೌನವಹಿಸಿರುವುದು ವಿಪರ್ಯಾಸವಾಗಿದೆ. ಇಲ್ಲಿನ ಕೆರೆ ಸಂರಕ್ಷಣೆಗೆ ಪ್ರತಿಯೊಬ್ಬರ ಹೊಣೆಯಾಗಿದೆ. ಆದ್ದರಿಂದ ಜನಪ್ರತಿನಿಧಿಗಳು, ಅಧಿಕಾರಿಗಳು ಕೂಡಲೇ ಗಮನಕ್ಕೆ ತೆಗೆದುಕೊಂಡು, ಇಲ್ಲಿನ ದರೋಜಿ ಕೆರೆ ಸಂರಕ್ಷಿಸುವ ಮೂಲಕ ಉಳಿಸಬೇಕು. ಇಲ್ಲವಾದಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರ ಮತ್ತು ಕರ್ನಾಟಕ ಲೋಕಾಯುಕ್ತಗೆ ದೂರು ಸಲ್ಲಿಸಲಾಗುವುದು. ಮತ್ತು ಮುಂದಿನ ದಿನದಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದರು. ಸಮಾಜ ಸೇವಾ ಕಾರ್ಯಕರ್ತರ ವೇದಿಕೆಯ ರಾಜ್ಯ ಕಾರ್ಯಾಧ್ಯಕ್ಷ ಟಿ.ಎಚ್.ಎಂ.ರಾಜ–ಕುಮಾರ ಮಾತನಾಡಿ, ಇಲ್ಲಿನ ಕೆರೆಯಿಂದಾಗಿ ಜನ, ಜಾನುವಾರು, ಪಕ್ಷಿ, ಪ್ರಾಣಿಗಳಿಗೆ ಅನುಕೂಲವಾಗಿದೆ. ಆದರೆ, ಕೆಲ ವರ್ಷಗಳಿಂದ ಕಾರ್ಖಾನೆಗಳಿಂದ ಬರುವ ಕಲುಷಿತ ನೀರು ಕೆರೆಗೆ ಸೇರುತ್ತಿದ್ದು, ನೀರು ಮಲೀನವಾಗಿ, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಎಚ್ಚೆತ್ತು, ಕೆರೆ ಸಂರಕ್ಷಣೆಗೆ ಮುಂದಾಗಬೇಕು ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಎಂ.ಎಸ್.ಗುರುಮೂರ್ತಿ, ವಿ.ಮಾಯಣ್ಣ, ವಿ.ಗೋಪಾಲ. ವಿನೋದ, ಜಾಫರ್, ಸುರೇಶ, ಶಂಕ್ರಪ್ಪ, ಭೀಮಾ, ಹೊನ್ನೂರಸ್ವಾಮಿ ಇದ್ದರು. ವರದಿ : ಜಿಲಾನಸಾಬ್ ಬಡಿಗೇರ್

# ಮುಸ್ಲಿಂ ಬ್ಯಾಂಕದಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

❑ ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಪಟ್ಟಣದ ಮುಸ್ಲಿಂ ಸಮಾಜದ ಪ್ರತಿಷ್ಠಿತ ದಿ. ಮುಸ್ಲಿಂ ಕೋಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಇದರ 90ನೇ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ಈ ಬಾರಿ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕುಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿ, ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷ ಮಹಬೂಬ ಕೆಂಭಾವಿ ಅವರು ಮಾತನಾಡಿ ನಮ್ಮ ಸಮುದಾಯದ ಮಕ್ಕಳು ಆಸಕ್ತಿಯಿಂದ ಅಧ್ಯಯನ ಮಾಡಿ ತಮ್ಮ ಭವಿಷ್ಯವನ್ನು ಉಜ್ವಲ ಗೊಳಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಅವರನ್ನು ಪ್ರೋತ್ಸಾಹಿಸಲು ಪ್ರತಿ ವರ್ಷ ಬ್ಯಾಂಕಿನ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಮಾಡಿಕೊಳ್ಳಬೇಕು. ಎಂದರು. ವೇದಿಕೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷೆ ಸಕೀನಾಬಿ ಲಾಹೋರಿ, ನಿರ್ದೇಶಕರಾದ ಸಿ.ಎ.ಖಾಂಜಾದೆ,ಫಯಾಜ್ ಉತ್ನಾಳ, ಎಂ.ಎಚ್. ಮನಗೂಳಿ, ಎಸ್. ಎಂ. ಡೋಣಿ, ಡಿ. ಎಲ್.ಚೌದ್ರಿ, ಎಂ.ಆಯ್. ಇನಾಮದಾರ, ಎಂ.ಎಂ.ಅರ್ಜುಣಗಿ, ಎಂ.ಕೆ.ಮನ್ನೂರ, ಎಂ.ಎ.ಅತ್ತಾರ, ಆರ್. ಎಸ್. ಬೇಪಾರಿ, ನಿರ್ದೇಶಕಿ ಎಂ.ಎಚ್. ಚನ್ನೂರ, ವೃತ್ತಿಪರ ನಿರ್ದೇಶಕ ಎ.ಎಂ.ಹಿಪ್ಪರಗಿ,ಬ್ಯಾಂಕಿನ ವ್ಯವಸ್ಥಾಪಕ ಎಲ್. ಆರ್. ನಾಗೂರ,ಸಹಾಯಕ ವ್ಯವಸ್ಥಾಪಕ ಎಚ್.ಎಂ.ಹಂಡೇಬಾಗ, ಮಾರಟಾಧಿಕಾರಿ ಆರ್.ಕೆ. ನಡುವಿನಮನಿ. ಸಮಾಜದ ಪ್ರಮುಖರಾದ ಗನಿಸಾಬ ಲಾಹೋರಿ, ಮಾಸೂಮಸಾಬ ಕೆಂಭಾವಿ, ಹಸನಸಾಬ ಮನಗೂಳಿ, ಎ.ಎಸ್.ನಮಾಜಕಟ್ಟಿ, ಅಲ್ಲಾಭಕ್ಷ ಚಳ್ಳಿಗಿಡದ,ಮುದ್ದು ಪಟೇಲ, ಬ್ಯಾಂಕಿನ ಸಿಬ್ಬಂದಿ ವರ್ಗ ಹಾಗೂ ಶೇರುದಾರರು ಇದ್ದರು.

# ಮುಸ್ಲಿಂ ಬ್ಯಾಂಕಿನ ಹಿರಿಯ ಶೇರುದಾರರಿಗೆ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಪಟ್ಟಣದ ಮುಸ್ಲಿಂ ಸಮಾಜದ ಪ್ರತಿಷ್ಠಿತ ದಿ. ಮುಸ್ಲಿಂ ಕೋಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಇದರ 90ನೇ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ಬ್ಯಾಂಕಿನ ಹಿರಿಯ ಶೇರುದಾರರಿಗೆ ನಿರ್ದೇಶಕ ಮಂಡಳಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷ ಮಹಬೂಬ ಕೆಂಭಾವಿ ಅವರು ಮಾತನಾಡಿ ಪ್ರತಿ ವರ್ಷ ವಾರ್ಷಿಕ ಸರ್ವಸಾಧರಣ ಸಭೆಯಲ್ಲಿ ಬ್ಯಾಂಕಿನ ವತಿಯಿಂದ ಹಿರಿಯ ಶೇರುದಾರರಿಗೆ ಗೌರವಿಸುವ ಕಾರ್ಯವನ್ನು ಮಾಡುತ್ತಿದ್ದೇವೆ. ಶೇರುದಾರರು ಬ್ಯಾಂಕಿನ ನಿಜವಾದ ಮಾಲೀಕರಾಗಿದ್ದಾರೆ ಅವರನ್ನು ಗೌರವಿಸುವುದನ್ನು ನಮ್ಮ ಕರ್ತವ್ಯವಾಗಿದೆ ಎಂದರು. ವೇದಿಕೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷೆ ಸಕೀನಾಬಿ ಲಾಹೋರಿ, ನಿರ್ದೇಶಕರಾದ ಸಿ.ಎ.ಖಾಂಜಾದೆ,ಫಯಾಜ್ ಉತ್ನಾಳ, ಎಂ.ಎಚ್. ಮನಗೂಳಿ, ಎಸ್. ಎಂ. ಡೋಣಿ, ಡಿ. ಎಲ್.ಚೌದ್ರಿ, ಎಂ.ಆಯ್. ಇನಾಮದಾರ, ಎಂ.ಎಂ.ಅರ್ಜುಣಗಿ, ಎಂ.ಕೆ.ಮನ್ನೂರ, ಎಂ.ಎ.ಅತ್ತಾರ, ಆರ್. ಎಸ್. ಬೇಪಾರಿ, ನಿರ್ದೇಶಕಿ ಎಂ.ಎಚ್. ಚನ್ನೂರ, ವೃತ್ತಿಪರ ನಿರ್ದೇಶಕ ಎ.ಎಂ.ಹಿಪ್ಪರಗಿ,ಬ್ಯಾಂಕಿನ ವ್ಯವಸ್ಥಾಪಕ ಎಲ್. ಆರ್. ನಾಗೂರ,ಸಹಾಯಕ ವ್ಯವಸ್ಥಾಪಕ ಎಚ್.ಎಂ.ಹಂಡೇಬಾಗ, ಮಾರಟಾಧಿಕಾರಿ ಆರ್.ಕೆ. ನಡುವಿನಮನಿ. ಸಮಾಜದ ಪ್ರಮುಖರಾದ ಗನಿಸಾಬ ಲಾಹೋರಿ, ಮಾಸೂಮಸಾಬ ಕೆಂಭಾವಿ, ಹಸನಸಾಬ ಮನಗೂಳಿ, ಎ.ಎಸ್.ನಮಾಜಕಟ್ಟಿ, ಅಲ್ಲಾಭಕ್ಷ ಚಳ್ಳಿಗಿಡದ,ಮುದ್ದು ಪಟೇಲ, ಬ್ಯಾಂಕಿನ ಸಿಬ್ಬಂದಿ ವರ್ಗ ಹಾಗೂ ಶೇರುದಾರರು ಇದ್ದರು.

# ಜಂತು ಹುಳು ಮಾತ್ರೆ ಮಕ್ಕಳ ಆರೋಗ್ಯ ರಕ್ಷಣೆಗೆ ಭದ್ರ ಬುನಾದಿ : ಡಾ . ಹನ್ಮಂತರಾಯ ತಳ್ಳಳ್ಳಿ

❑ ನೈಜ್ಯ ದೆಸೆ ನ್ಯೂಸ್



ಲಿಂಗಸಗೂರು : ಪಟ್ಟಣದ ಪುರಸಭೆ ವ್ಯಾಪ್ತಿಯ ಹುಲಿಗುಡ್ಡ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಅಲ್ಬೆಂಡಾಜೋಲ್ ಮಾತ್ರೆ ನೀಡುವ ಮೂಲಕ ರಾಷ್ಟ್ರೀಯ ಜಂತು ಹುಳು ನಿವಾರಣಾ ದಿನಕ್ಕೆ ಚಾಲನೆ ನೀಡಿ ಮಾತನಾಡಿದ ತಾಲೂಕ ಆರೋಗ್ಯಾಧಿಕಾರಿ ಡಾ: ಹನ್ಮಂತರಾಯ ತಳ್ಳಳ್ಳಿ ಜಂತು ಹುಳು ಮಾತ್ರೆ ಮಕ್ಕಳ ಆರೋಗ್ಯ ರಕ್ಷಣೆಗೆ ಭದ್ರ ಬುನಾದಿ ಯಾಗಳಿದ್ದು ಮಕ್ಕಳು ಬಯಲು ಶೌಚಾಲಯ ಮಾಡುವುದು ತೆರೆದಿಟ್ಟ ಆಹಾರ ಸೇವನೆ , ಉಗುರು ತೆಗೆದಿರುವಿಕೆ, ಮತ್ತು ಕೈ ಸ್ವಚ್ಛ ತೆಗೆದುಕೊಳ್ಳುದಿರುವಾಗ ಇತರ ಕಾರಣಗಳಿಂದ ಜಂತು ಕ್ರಿಮಿ ಸೋಂಕು ಉಂಟಾಗಿ ಮಕ್ಕಳಲ್ಲಿ ರಕ್ತ ಹೀನತೆ ಉಂಟಾಗುತ್ತದೆ. ಇದರಿಂದ ದೈಹಿಕ ಮಾನಸಿಕ ಆರೋಗ್ಯ ತೊಂದರೆಯಿಂದ ಅಭ್ಯಾಸ ಮತ್ತು ದೈಹಿಕ ಚಟುವಟಿ–ಕೆಯಲ್ಲಿ ಹಿಂದುಳಿಯುವರು ಆದ್ದರಿಂದ ವರ್ಷದಲ್ಲಿ ಎರಡು ಬಾರಿ ನೀಡುವ ಜಂತು ನಿವಾರಕ ಮಾತ್ರೆಗಳನ್ನು 1 ವರ್ಷದಿಂದ 19 ವರ್ಷದೊಳಗಿನ ಎಲ್ಲರೂ ಕಡ್ಡಾಯ ವಾಗಿ ಸೇವಿಸಬೇಕು. ಶಿಕ್ಷಣ ಇಲಾಖೆ ಹಾಗೂ ಅಂಗನವಾಡಿ ಮಕ್ಕಳಿಗೆ ಕಡ್ಡಾಯವಾಗಿ ನೀಡಬೇಕು. ತಾಲೂಕಿನಲ್ಲಿ ಒಂದು ಲಕ್ಷ ಇಪ್ಪತ್ತೇಳು ಸಾವಿರ ( 1,27,000)ಮಕ್ಕಳಿಗೆ ಮಾತ್ರೆ ನುಂಗಿಸುವ ಗುರಿ ಇದೆ.ಎಲ್ಲರ ಸಹಕಾರದಿಂದ ಕಾರ್ಯಕ್ರಮ ಯಶಸ್ವಿಗೊಳಿಸಲು ಕೋರಿದರು . ಈ ಸಂದರ್ಭದಲ್ಲಿ ಡಾ: ಅಂಬಿಕಾ , ಎಸ್.ಡಿ.ಎಂ.ಸಿ ಅಧ್ಯಕ್ಷ ಶಂಕರ ಗೋಸ್ಲೆ , ಸದಸ್ಯರಾದ ರವಿಕುಮಾರ. ಶಿವಲಿಂಗಪ್ಪ , ರಾಚಪ್ಪ , ನೂರಜಾ ಬೇಗಂ.ಶಿಕ್ಷಕ ರಾದ ಶಿವಯೋಗಿ , ಸವಿತಾ , ಉಪಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಪ್ರಾಣೇಶ ಜೋಶಿ. ಎಸ್.ಹೆಚ್.ವಿ ನಾಗರತ್ನ , ಆಶಾಕಾರ್ಯಕರ್ತೆ ರೇಣುಕಾ , ಅಂಗನವಾಡಿ ಕಾರ್ಯಕರ್ತೆ ಪ್ರಮೀಳಾ, ಶಾಲಾ ಮಕ್ಕಳು , ಸೇರಿದಂತೆ ಇತರರು ಭಾಗವಹಿಸಿದ್ದರು.

## ರಾಜ್ಯದ ರಜಪೂತರು ಸರ್ವ ಸಂಘಟಿತರಾಗಿ : ರಾಜ್ಯಾಧ್ಯಕ್ಷ ಆರ್.ಬಾಲಾಜಿ ಸಿಂಗ್

# ಮಹಾರಾಣ ಪ್ರತಾಪಸಿಂಹರ ಅದ್ದೂರಿ ಜಯಂತ್ಯುತ್ಸ

❑ ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ರಜಪೂತ್ ಸಮಾಜ ಭಾನುವಾರ ಹಮ್ಮಿಕೊಂಡಿದ್ದ ರಾಷ್ಟ್ರಪ್ರೇಮಿ ಶ್ರೀ ಮಹಾರಾಣಾ ಪ್ರತಾಪಸಿಂಹರ 486ನೇ ಜಯಂತ್ಯುತ್ಸವ ನಿಮಿತ್ತ ಮಹಾರಾಣ ಪ್ರತಾಪಸಿಂಹರ ಭಾವಚಿತ್ರ ಮೆರವಣಿಗೆ, ವೀರಶೈವ ಭವನದಲ್ಲಿ ಜಯಂತ್ಯುತ್ಸವ ಸಮಾರಂಭ ನಡೆಯಿತು. ಬೆಂಗಳೂರಿನ ಕರ್ನಾಟಕ ಕ್ಷತ್ರೀಯ ರಜಪೂತ್ ಮಹಾಸಭಾದ ರಾಜ್ಯಾಧ್ಯಕ್ಷ ಆರ್.ಬಾಲಾಜಿ ಸಿಂಗ್ ಸಮಾರಂಭಕ್ಕೆ ಚಾಲನೆ ನೀಡಿ, ರಾಜ್ಯದ ರಜಪೂತರನ್ನು ಒಂದೇ ವೇದಿಕೆಯಲ್ಲಿ ತಂದು ಸಂಘಟಿತರನ್ನಾಗಿಸಲು ರಾಜ್ಯ ಸಂಚಾರ ಕೈಗೊಳ್ಳಲಾಗುವುದು. ಸದ್ಯ ಮಹಾಸಭಾದ ಕಾರ್ಯಕಾರಣಿ ಸಮಿತಿ ಪದಾಧಿಕಾರಿಗಳ ಖಾಲಿ ಇರುವ ಸ್ಥಾನಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು. ರಾಜ್ಯದ ರಜಪೂತರು ಭಿನ್ನಾಭಿಪ್ರಾಯ ತೊರೆದು ಸರ್ವ ಸಂಘಟಿ–ತರಾಗಬೇಕಿದೆ ಎಂದರು.ಕಂಪ್ಲಿ ರಜಪೂತ್ ಸಮಾಜದ ತಾಲೂಕು ಅಧ್ಯಕ್ಷ ಇಂದ್ರಜಿತ್‌ಸಿಂಗ್ ಅಧ್ಯಕ್ಷತೆವಹಿಸಿ ಮಾತನಾಡಿ, ಕರ್ನಾಟಕ ಕ್ಷತ್ರೀಯ ರಜಪೂತ್ ಅಭಿವೃದ್ಧಿ ನಿಗಮ ರಚಿಸುವಲ್ಲಿ ಸರ್ಕಾರ ಮುಂದಾಗಬೇಕು. ಇದಕ್ಕಾಗಿ ಡಿಜಿಟಲೀಕರಣ ಪ್ರಕ್ರಿಯೆ ಮುನ್ನಡೆದಿದೆ. ತಾಲೂಕಿನಲ್ಲಿ ಶೇ.100ರಷ್ಟು ಡಿಜಿಟಲೀಕರಣ ಸಾಧಿಸಿದೆ. ಪಟ್ಟಣದಲ್ಲಿ ರಾಣಾ ಪ್ರತಾಪಸಿಂಹರ ಪುತ್ಥಳಿ ಸ್ಥಾಪನೆಯೊಂದಿಗೆ ವೃತ್ತ ನಿರ್ಮಾಣ, ರಸ್ತೆ ಪ್ರತಾಪಸಿಂಹರ ಹೆಸರಿಡುವಲ್ಲಿ ರಜಪೂತ್ ಸಮುದಾಯ ಭವನ ನಿರ್ಮಿಸಿಕೊಡುವಲ್ಲಿ ಶಾಸಕರು, ಪುರಸಭಾಡಳಿತ ಮುಂದಾಗಬೇಕು ಎಂದು ಒತ್ತಾಯಿಸಿದರು. ಇದಕ್ಕು ಮುನ್ನ ಅಯ್ಯಪ್ಪಸ್ವಾಮಿ ದೇವಸ್ಥಾನದಿಂದ ಶ್ರೀ ರಾಣಾ ಪ್ರತಾಪಸಿಂಹರ ಭಾವಚಿತ್ರ ಮೆರವಣಿಗೆ ನಡೆಯಿತು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಕಂಪ್ಲಿ ರಜಪೂತ ಸಮಾಜದ ಕಾರ್ಯದರ್ಶಿ ಮಾರುತಿ ವಕೀಲ, ಉಪಾಧ್ಯಕ್ಷ ಲಕ್ಷ□□ಣ್‌ಸಿಂಗ್, ವೀರಶೈವ ಲಿಂಗಾಯತ ಯುವ ವೇದಿಕೆ ಜಿಲ್ಲಾಧ್ಯಕ್ಷ ಹೊಸಕೋಟೆ ಜಗದೀಶ, ಕರ್ನಾಟಕ ಕ್ಷತ್ರೀಯ ರಜಪೂತ್ ಮಹಾಸಭಾದ ಮಹಿಳಾ ಅಧ್ಯಕ್ಷೆ ಅನ್ನಪೂರ್ಣ ಸಿಂಗ್, ಬಳ್ಳಾರಿ ಜಿಲ್ಲಾಧ್ಯಕ್ಷ ಬಾಲಾಜಿ ಸಿಂಗ್, ರಜಪೂತ್ ಸಮಾಜದ ಅಧ್ಯಕ್ಷರಾದ ಹೊಸಪೇಟೆಯ ಶೇರ್‌ಸಿಂಗ್, ಕಾರಟಗಿಯ ಶಂಕರ್‌ಸಿಔಗ್, ಗಂಗಾವತಿಯ ಘನಶಾಮಸಿಂಗ್, ಮುದ್ದೇಬಿಹಾಳದ ಉದಯಸಿಂಗ್, ತಾವರೆಗೆರೆಯ ನಾರಾಯಣಸಿಂಗ್, ಮಸ್ಕಿಯ ಅಶೋಕಸಿಂಗ್ ಟಾಕೂರ್, ಬಿಜಾಪುರದ ಅಧ್ಯಕ್ಷ ಭೀಮ್‌ಸಿಂಗ್ ಇತರರಿದ್ದರು. ವರದಿ : ಜಿಲಾನಸಾಬ್ ಬಡಿಗೇರ್

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಇಂಟಿಗ್ರೇಟೆಡ್ ಪಿಎಚ್‌ಡಿ (Integrated Ph.D.)

ಇಂಟಿಗ್ರೇಟೆಡ್ ಪಿಎಚ್‌ಡಿ ಎಂದರೆ ಮಾಸ್ಟರ್ಸ್ + ಪಿಎಚ್‌ಡಿ ಹಂತಗಳನ್ನು ಒಂದೇ ನಿರಂತರ ಕಾರ್ಯಕ್ರಮದಲ್ಲಿ ಪೂರ್ಣಗೊಳಿಸುವ ಉನ್ನತ ಶಿಕ್ಷಣದ ಮಾರ್ಗ. ಸಂಶೋಧನಾ ಕ್ಷೇತ್ರದಲ್ಲಿ ಮುಂದುವರಿಯಲು ಬಯಸುವ ವಿದ್ಯಾರ್ಥಿಗಳಿಗೆ ಇದು ಉತ್ತಮ ಆಯ್ಕೆಯಾಗಿದೆ. ಪ್ರಮುಖ ವಿಶೇಷತೆಗಳು:ಅವಧಿ: ಸಾಮಾನ್ಯವಾಗಿ 5□7 ವರ್ಷಗಳು; ಸಂಸ್ಥೆ ಮತ್ತು ವಿಷಯದ ಪ್ರಕಾರ ಬದಲಾಗಬಹುದು.ಅರ್ಹತೆ: ಸಂಬಂಧಿತ ವಿಷಯದಲ್ಲಿ B.Sc., B.E., B.Tech ಅಥವಾ ಸಮಾನ ಪದವಿ. ಕೆಲವು ಸಂಸ್ಥೆಗಳು ನಿರ್ದಿಷ್ಟ ಶೇಕಡಾವಾರು ಅಂಕಗಳನ್ನು ಕೇಳಬಹುದು.ಪ್ರವೇಶ: ಸಂಸ್ಥೆಯ ನಿಯಮದಂತೆ ಎಂಟ್ರ, CUET, GATE ಅಥ–ವಾ ಸ್ವಂತ ಪ್ರವೇಶ ಪರೀಕ್ಷೆ/ಸಂದರ್ಶನ ಇರಬಹುದು.ಮುಖ್ಯ ಕ್ಷೇತ್ರಗಳು: ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಜೀವಶಾಸ್ತ್ರ, ಕಂಪ್ಯೂಟರ್ ಸೈನ್ಸ್, ಇಂಜಿನಿಯ–ರಿಂಗ್ ಮತ್ತು ಕೆಲವು ಮಾನವಿಕ/ಸಾಮಾಜಿ–ಕ ವಿಜ್ಞಾನ ಕ್ಷೇತ್ರಗಳು. ಕೋರ್ಸ್ ಹೇಗಿರುತ್ತದೆ?1. ಆರಂಭಿಕ ಹಂತ:ಮೊದಲ ಕೆಲವು ವರ್ಷಗಳಲ್ಲಿ ಸ್ನಾತಕೋತ್ತರ ಮಟ್ಟದ ಕೋರ್ಸ್‌ವರ್ಕ್, ಪ್ರಯೋಗಾಲಯ ತರಬೇತಿ ಮತ್ತು ವಿಷಯದ ಆಳವಾದ ಅಧ್ಯಯನ ನಡೆಯುತ್ತದೆ.2. ಸಂಶೋಧನಾ ಹಂತ:ನಂತರ ವಿದ್ಯಾರ್ಥಿ ತನ್ನ ಆಸಕ್ತಿಯ ಕ್ಷೇತ್ರದಲ್ಲಿ ಸಂಶೋಧನಾ ವಿಷಯವನ್ನು ಆಯ್ಕೆ ಮಾಡಿಕೊಂಡು Ph.D. ಸಂಶೋಧನೆ ನಡೆಸುತ್ತಾನೆ.3. ಪ್ರಬಂಧ (Thesis):ಸಂಶೋಧನೆಯ ಫಲಿತಾಂಶಗಳನ್ನು ಆಧರಿಸಿ ಕ್ಷ.ಆ. ಪ್ರಬಂಧವನ್ನು ಸಿದ್ಧಪಡಿಸಿ ವಿಶ್ವವಿದ್ಯಾಲಯದ ನಿಯಮದಂತೆ ಮಂಡನೆ/ವೈವಾ ಪೂರ್ಣಗೊಳಿಸಬೇಕು. ಫೆಲೋಶಿರ್ಹತೆ ಮತ್ತು ಸಂಸ್ಥೆಯ ನಿಯಮಗಳಿಗೆ ಅನುಗುಣವಾಗಿ ಸಂಶೋಧನಾ ಹಂತದಲ್ಲಿ ಎಖಈ/ಖಖಈ ಅಥವಾ ಇತರೆ ಫೆಲೋಶಿಪ್‌ಗಳ ಮೂಲಕ ಮಾಸಿಕ ಸ್ಟೈಫಂಡ್ ದೊರೆಯಬಹುದು. ಆದರೆ ಮೊತ್ತ ಮತ್ತು ಅರ್ಹತೆ ಸಂಸ್ಥೆಯಿಂದ ಸಂಸ್ಥೆಗೆ ಬದಲಾಗುತ್ತದೆ. ಎಲ್ಲಿ ಓದಬಹುದು?ಭಾರತದಲ್ಲಿ ಇಂತಹ ಸಂಶೋಧನಾ ಕಾರ್ಯಕ್ರಮಗಳಿಗೆ IISc Bengaluru, JNCASR ಮತ್ತು IISEಖಗಳಂತಹ ಸಂಸ್ಥೆಗಳು ಪ್ರಮುಖವಾಗಿವೆ. ಆದರೆ ಪ್ರತಿಯೊಂದು ಸಂಸ್ಥೆಯಲ್ಲೂ Integrated Ph.D. ಪ್ರವೇಶನಿಯಮಗಳು ಮತ್ತು ಲಭ್ಯವಿರುವ ವಿಷಯಗಳು ವಿಭಿನ್ನವಾಗಿರುತ್ತವೆ. ಪ್ರಯೋಜನಗಳು ಮಾಸ್ಟರ್ಸ್ ಮತ್ತು ಪಿಎಚ್‌ಡಿ ಹಂತಗಳನ್ನು ನಿರಂತರವಾಗಿ ಮಾಡಲು ಅವಕಾಶ ಸಂಶೋಧನಾ ಕೌಶಲ್ಯಗಳನ್ನು ಆರಂಭದಿಂದಲೇ ಅಭಿವೃದ್ಧಿಪಡಿಸಬಹುದು ಸಂಶೋಧನಾ ವೃತ್ತಿಜೀವನಕ್ಕೆ ಉತ್ತಮ ತಯಾರಿ ಕೆಲವು ಕಾರ್ಯಕ್ರಮಗಳಲ್ಲಿ ಫೆಲೋಶಿಪ್/ಸ್ಟೈಫಂಡ್ ಸೌಲಭ್ ಪ್ರತ್ಯೇಕವಾಗಿ ಎರಡು ಪ್ರವೇಶ ಪ್ರಕ್ರಿಯೆಗಳನ್ನು ಎದು–ರಿಸುವ ಅಗತ್ಯ ಕಡಿಮೆಯಾಗಬಹುದುಉ–ದ್ಯೋಗಾವಕಾಶಗಳು Integrated Ph.D. ಪೂರ್ಣಗೊಳಿಸಿದ ನಂತರ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕ/ಸಂಶೋಧಕ, R&D ಸಂಸ್ಥೆಗಳಲ್ಲಿ Research Scientist, ಉದ್ಯಮ ಕ್ಷೇತ್ರದ R&D ತಜ್ಞ, ಡೇಟಾ/ವೈಜ್ಞಾನಿಕ ಸಂಶೋಧಕ ಮುಂತಾದ ವೃತ್ತಿಗಳತ್ತ ಸಾಗಬಹುದು.ಸೂಚನೆ: Integrated Ph.D. ಮತ್ತು Integrated M.Sc.–Ph.D. ಕಾರ್ಯಕ್ರಮಗಳ ಹೆಸರು, ಅವಧಿ, ಅರ್ಹತೆ ಹಾಗೂ ಪ್ರವೇಶ ಪರೀಕ್ಷೆಗಳು ಸಂಸ್ಥೆಗನುಸಾರ ಬದಲಾಗುತ್ತವೆ. ಆದ್ದರಿಂದ ಅರ್ಜಿ ಸಲ್ಲಿಸುವ ಮೊದಲು ಆಯಾ ಸಂಸ್ಥೆಯ ಅಧಿಕೃತ ಅಧಿಸೂಚನೆಯನ್ನು ಪರಿಶೀಲಿಸುವುದು ಮುಖ್ಯ.

# ವಿದ್ಯಾರ್ಥಿಗಳ ಮೇಲಿನ ಹಲ್ಲೆ ಖಂಡನೀಯ: ಸಂಸದ ಜಿ. ಕುಮಾರ್

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: ನಗರದ ಸಂಸದರ ಕಚೇರಿಯಲ್ಲಿ ಇಂದು ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾಧ್ಯಮದವರನ್ನು ಉದ್ದೇಶಿಸಿ ಮಾತನಾಡಿದ ಸಂಸದ ಜಿ. ಕುಮಾರ್ ನಾಯಕ ಅವರು, 'ಛಾತ್ರೋ ಕಿ ಗೂಂಜ್' ವಿಚಾರದ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ವಿದ್ಯಾರ್ಥಿಗಳ ಮೇಲಿನ ಹಲ್ಲೆ ಹಾಗೂ ದೌರ್ಜನ್ಯವನ್ನು ತೀವ್ರವಾಗಿ




ಖಂಡಿಸಿದರು.ವಿದ್ಯಾರ್ಥಿಗಳ ಹಕ್ಕುಗಳು ಹಾಗೂ ಅವರ ಸುರಕ್ಷತೆಯನ್ನು ಕಾಪಾಡುವುದು ಅತ್ಯಂತ ಅಗತ್ಯವಾಗಿದ್ದು, ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸುವುದು ಅಥವಾ ಅವರ ಧ್ವನಿಯನ್ನು ಹತ್ತಿಕ್ಕುವುದು ಸರಿಯಲ್ಲ ಎಂದು ಅವರು ಹೇಳಿದರು. ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ಆಲಿಸಿ, ಸೂಕ್ತ ಪರಿಹಾರ ಕಲ್ಪಿಸಬೇಕೆಂದು ಅವರು ಒತ್ತಾಯಿಸಿದರು.ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಶ್ರೀ ಎನ್.ಎಸ್. ಬೋಸರಾಜ್, ಕಾಂಗ್ರೆಸ್ ಪಕ್ಷದ ಮುಖಂಡರಾದ ಶ್ರೀ ಕೆ. ಶಾಂತಪ್ಪ, ಶ್ರೀ ಜಿ. ಶಿವಮೂರ್ತಿ, ಶ್ರೀನಿವಾಸ ರೆಡ್ಡಿ, ಶ್ರೀ ರಾಜಶೇಖರ್ ನಾಯಕ್, ಶ್ರೀ ಜಯಂತರಾವ್ ಪತಂಗೆ, ಶ್ರೀ ಅಮರೇಗೌಡ ಹಂಚಿನಾಳ, ಭೀಮರಾಯ ಠಾಣಗುಂದಿ, ಮರಿಸ್ವಾಮಿ, ಕುರುಬದೊಡ್ಡಿ ಆಂಜನೇಯ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಸಿಂಧನೂರಿನಲ್ಲಿ ಮೊಳಗಿದ ಸಾಮಾಜಿಕ ನ್ಯಾಯದ ಘೋಷಣೆ!

❑ ನೈಜ್ಯ ದೆಸೆ ನ್ಯೂಸ್

ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾದ ರಾಯಚೂರು□ಬಳ್ಳಾರಿ ಜಿಲ್ಲಾ ಸಮಾವೇಶ ಯಶಸ್ವಿ

ಸಿಂಧನೂರು: ವೆಲ್ಫೇರ್ ಪಾರ್ಟಿ ಆಫ್ ಇಂಡಿಂ–ಯಾದ ರಾಯಚೂರು□ಬಳ್ಳಾರಿ ಜಿಲ್ಲಾ ಸಮಾವೇಶವು ಅಪಾರ ಸಂಖ್ಯೆಯ ಕಾರ್ಯಕರ್ತರು, ಮುಖಂಡರು ಹಾಗೂ ಬೆಂಬಲಿಗರ ಉತ್ಸಾಹಭ–ರಿತ ಭಾಗವಹಿಸುವಿಕೆಯೊಂದಿಗೆ ಅದ್ದೂರಿಯಾಗಿ ಹಾಗೂ ಯಶಸ್ವಿಯಾಗಿ ನಡೆಯಿತು.ಸಮಾವೇಶದ ಅಂಗವಾಗಿ ನಡೆದ ಬೃಹತ್ ಬೈಕ್ ರ‍್ಯಾಲಿ ಸಿಂಧನೂರು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪಕ್ಷದ ಸಾಮಾಜಿಕ ನ್ಯಾಯ, ಸಮಾನತೆ, ಸಂವಿಧಾನಾತ್ಮಕ ಮೌಲ್ಯಗಳು ಹಾಗೂ ಜನಪರ ರಾಜಕೀಯದ ಸಂದೇಶವನ್ನು





ಸಾರಿತು. ಪಕ್ಷದ ಧ್ವಜಗಳು, ಘೋಷಣೆಗಳು ಮತ್ತು ಕಾರ್ಯಕರ್ತರ ಉತ್ಸಾಹದಿಂದ ನಗರದಲ್ಲಿ ಹೋರಾಟದ ಕಳೆ ಮೂಡಿತ್ತು. ಕಾರ್ಯಕ್ರಮಕ್ಕೆ ಆಗಮಿಸಿದ ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾದ ರಾಜ್ಯಾಧ್ಯಕ್ಷರು ಹಾಗೂ ರಾಜ್ಯ ಮುಖಂಡರನ್ನು ಪಕ್ಷದ ಕಾರ್ಯಕರ್ತರು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ನಡೆದ ಜಿಲ್ಲಾ ಸಮಾವೇಶದಲ್ಲಿ ಪಕ್ಷದ ಸಂಘಟನೆಯನ್ನು ತಳಮಟ್ಟದಿಂದ ಮತ್ತಷ್ಟು ಬಲಪಡಿಸುವುದು, ಜನರ ಸಮಸ್ಯೆಗಳ ಪರವಾಗಿ ನಿರಂತರವಾಗಿ ಧ್ವನಿ ಎತ್ತುವುದು ಹಾಗೂ ಶೋಷಿತ, ದುರ್ಬಲ ಮತ್ತು ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ಪ್ರಜಾಸತ್ತಾತ್ಮಕ ಹೋರಾಟವನ್ನು ತೀವ್ರಗೊಳಿಸುವ ಕುರಿತು ಚರ್ಚಿಸಲಾಯಿತು.ಇಂದಿನ ರಾಜ–ಕೀಯದಲ್ಲಿ ಅಧಿಕಾರಕ್ಕಿಂತ ಜನರ ಹಕ್ಕುಗಳು, ಸ್ವಾರ್ಥಕ್ಕಿಂತ ಸಾಮಾಜಿಕ ನ್ಯಾಯ ಮತ್ತು ರಾಜ–ಕೀಯ ಲಾಭಕ್ಕಿಂತ ಮೌಲ್ಯಾಧಾರಿತ ಸಾರ್ವಜನಿಕ ಜೀವನಕ್ಕೆ ಆದ್ಯತೆ ನೀಡುವ ಸಂಕಲ್ಪವನ್ನು ಕಾರ್ಯಕರ್ತರು ಪುನರುಚ್ಚರಿಸಿದರು. ಜಿಲ್ಲೆಯಾದ್ಯಂತ ಪಕ್ಷದ ಸಂಘಟನೆಯನ್ನು ಮತ್ತಷ್ಟು ವಿಸ್ತರಿಸಿ, ಪ್ರತಿಯೊಂದು ಗ್ರಾಮ ಹಾಗೂ ವಾರ್ಡ್ ಮಟ್ಟದಲ್ಲಿ ಜನರ ಸಮಸ್ಯೆಗಳಿಗೆ ಸ್ಪಂದಿಸುವಂತಹ ಬಲಿಷ್ಠ ಸಂಘಟನೆಯನ್ನು ನಿರ್ಮಿಸುವ ಸಂಕಲ್ಪವನ್ನು ಸಮಾವೇಶದಲ್ಲಿ ಕೈಗೊಳ್ಳಲಾಯಿತು. ಸಮಾವೇಶದ ಯಶಸ್ಸಿಗೆ ಕಾರಣ–ರಾದ ರಾಯಚೂರು□ಬಳ್ಳಾರಿ ಜಿಲ್ಲೆಯ ಎಲ್ಲಾ ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರು, ಬೈಕ್ ರ‍್ಯಾಲಿಯಲ್ಲಿ ಭಾಗವಹಿಸಿದ ಯುವಕರು, ಮಹಿಳಾ ಕಾರ್ಯಕರ್ತರು ಹಾಗೂ ಪಕ್ಷದ ಅಭಿಮಾನಿಗಳಿಗೆ ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ □ ರಾಯಚೂರು ಜಿಲ್ಲಾ ಸಮಿತಿಯ ವತಿಯಿಂದ ಹೃತ್ಪೂರ್ವಕ ಕೃತಜ್ಞತೆಗಳು. ಇದು ಕೇವಲ ಸಮಾವೇಶವಲ್ಲ;ಸಾಮಾಜಿ–ಕ ನ್ಯಾಯದ ಹೋರಾಟಕ್ಕೆ ಹೊಸ ಶಕ್ತಿಯ ಸಂಕಲ್ಪ! ವೆಲ್ಫೇರ್ ಪಾರ್ಟಿ ಆಫ್ ಇಂಡಿಂ–ಯಾ ರಾಯಚೂರು ಜಿಲ್ಲಾ ಸಮಿತಿ.

## ಸಾರ್ವಜನಿಕ ಸಮಸ್ಯೆಗಳ ಪರಿಹಾರಕ್ಕಾಗಿ ಶಾಸಕ ಶ್ರೀ ಹಂಪನಗೌಡ ಬಾದರ್ಲಿ ಅವರಿಂದ ಜಿಲ್ಲಾಧಿಕಾರಿಗಳೊಂದಿಗೆ ಮಹತ್ವದ ಸಭೆ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು / ಸಿಂಧನೂರು:ಮಾನ್ಯ ಸಿಂಧನೂರು ವಿಧಾನಸಭಾ ಕ್ಷೇತ್ರದ ಜನಪ್ರತಿನಿಧಿಗಳಾದ ಶಾಸಕ ಶ್ರೀ ಹಂಪನಗೌಡ ಬಾದರ್ಲಿ ಅವರು ಇಂದು ರಾಯಚೂರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾ–ರಿಗಳಾದ ಶ್ರೀಮತಿ ಪೂವಿತಾ ಎಸ್., ಐಂಖ ಅವರನ್ನು ಭೇಟಿ ಮಾಡಿ, ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ಸಾರ್ವಜನಿಕರ ದೀರ್ಘಕಾಲಿಕ ಸಮಸ್ಯೆಗಳ ಕುರಿತು ಗಂಭೀರ ಚರ್ಚೆ ನಡೆಸಿದರು.



ಕ್ಷೇತ್ರದ ಜನರ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಕಲ್ಪಿಸುವುದು ಮತ್ತು ಅಭಿವೃದ್ಧಿ ಕಾರ್ಯಗಳಿಗೆ ವೇಗ ನೀಡುವ ನಿಟ್ಟಿನಲ್ಲಿ ಅಗತ್ಯವಿರುವ ಆಡಳಿತಾತ್ಮಕ ಕ್ರಮಗಳ ಕುರಿತು ಈ ಸಭೆಯಲ್ಲಿ ಸಮಾಲೋಚನೆ ನಡೆಸಲಾಯಿತು.ಸಿಂಧನೂರು ಕ್ಷೇತ್ರವು ಕೃಷಿ ಪ್ರಧಾನವಾಗಿದ್ದು, ತುಂಗಭದ್ರ ನಾಲೆಯ ಕೊನೆ ಭಾಗದ (Tail-end) ಜಮೀನುಗಳಿಗೆ ನೀರು ತಲುಪಿಸುವಲ್ಲಿ ಎದುರಾಗುತ್ತಿರುವ ತೊಡಕುಗಳನ್ನು ನಿವಾ–ರಿಸುವಂತೆ ಹಾಗೂ ರೈತರಿಗೆ ಬಿತ್ತನೆ ಬೀಜ ಮತ್ತು ರಸಗೊಬ್ಬರಗಳ ಕೊರತೆಯಾಗದಂತೆ ಮುನ್ನೆಚ್ಚರಿಕೆ ವಹಿಸಲು ಚರ್ಚಿಸಲಾಯಿತು.ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ (ಅಊಅ) ಅಗತ್ಯ ವೈದ್ಯಕೀಯ ಸಿಬ್ಬಂದಿ, ಜೀವ ರಕ್ಷಕ ಔಷಧಿಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವ ಕುರಿತು ಸಮಾಲೋಚನೆ ನಡೆಸಲಾಯಿತು.ಸರ್ಕಾರದ ವಿವಿಧ ಜನಪರ ಯೋಜನೆಗಳು ಹಾಗೂ ಗ್ಯಾರಂಟಿ ಯೋಜನೆಗಳು ಯಾವುದೇ ತೊಂದರೆಯಿಲ್ಲದೆ ಅರ್ಹ ಬಡ ಫಲಾನುಭವಿಗಳಿಗೆ ತಲುಪುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ವಿಳಂಬ ಧೋರಣೆ ಅನುಸರಿಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.ಕ್ಷೇತ್ರದ ಜನತೆಯ ವಿಶ್ವಾಸವನ್ನು ಉಳಿಸಿಕೊಳ್ಳಲು ಮತ್ತು ಪ್ರತಿಯೊಬ್ಬ ನಾಗರಿಕನ ಮೂಲಭೂತ ಸಮಸ್ಯೆಗಳಿಗೆ ತ್ವರಿತ ಪರಿಹಾರ ಕಲ್ಪಿಸಲು ತಾವು ಸದಾ ಬದ್ಧರಾಗಿರುವುದಾಗಿ ಶಾಸಕ ಶ್ರೀ ಹಂಪನಗೌಡ ಬಾದರ್ಲಿ ಅವರು ಈ ಸಂದರ್ಭದಲ್ಲಿ ತಿಳಿಸಿದರು.

# ಸಾಧಿಸುವ ಛಲವಿದ್ದರೆ ಬ್ರಹ್ಮಾಂಡವೇ ಕೈಜೋಡಿಸುತ್ತದೆ: ಸಾಹಿತಿ ಪತ್ತಾರ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ: ಯಾವುದಾದರೊಂದು ಒಂದು ಅದ್ವಿತೀಯವಾದುದನ್ನು ನಾವು ಸಾಧಿಸಬೇಕೆಂದರೆ ನಮ್ಮ ನಮ್ಮ ಹೃದಯದಲ್ಲಿ ಮನಸ್ಸಿನ ಭಾವನೆಗಳು ಬಲಿಷ್ಟಗೊಂಡು ಅದರ ಕನಸು ಕಂಡರೆ ಸಾಧಿಸುವ ಹಂಬಲವುಂಟಾದರೆ ಇಡೀ ಬ್ರಹ್ಮಾಂಡವೇ ನಮ್ಮ ಕೈ ಜೋಡಿಸಲಿದೆ" ಎಂಬುದು "ಅಲ್ ಕೆಮಿಸ್ಟ್" ಪುಸ್ತಕದಲ್ಲಿನ ಮಾತು. ಎಂದು ಜೆ.ಎಸ್.ಜಿ ಫೌಂಡೇಶನ್ ಕಾರ್ಯದರ್ಶಿ ಶ್ರೀಕಾಂತ ಪತ್ತಾರ ಹೇಳಿದರು ಅವರು ಸ್ಥಳೀಯ ಪ್ರತಿಭಾಲೋಕ ಕರಿಯರ್ ಅಕಾಡೆಮಿಯಲ್ಲಿ ಸ್ಥಳೀಯ ಕನ್ನಡ ಸಂಘದ ವತಿಯಿಂದ ನಡೆದ ಮಾಸಿಕ ಕಾರ್ಯಕ್ರಮ ಪುಸ್ತಕ ಪರಿಚಯ ಉಪನ್ಯಾಸ ಮಾಲಿಕೆಯಲ್ಲಿ ಅಲ್ ಕೆಮಿಸ್ಟ್" ಪುಸ್ತಕ ಕುರಿತು ಭಾನುವಾರ




ಮಾತನಾಡಿದರು. "ಸದುದ್ದೇಶದ ಅದ್ಭುತ ಸಂಕಲ್ಪಶಕ್ತಿಗೆ ವಿಶ್ವವೇ ಸಹಕಾರಿಯಾಗುತ್ತದೆ". ಭೌತಿಕ ನಿಧಿಯ ಅನ್ವೇಷಣೆಗಿಂತ ಅಂತರಂಗದ ಆನಂದದ ಅನ್ವೇಷಣೆ ಮುಖ್ಯ " ಮುಂತಾದ ಸ್ಫೂರ್ತಿ ನುಡಿ ಹೊಂದಿರುವ ಅಲ್ ಕೆಮಿಸ್ಟ್ ಕೃತಿಯು ಜಗತ್ತಿನಾದ್ಯಂತ 8.5ಕೋಟಿ ಪ್ರತಿಗಳ ಮಾರಾಟವಾಗಿರುವ ,100ಕ್ಕೂ ಹೆಚ್ಚಿನ ಭಾಷೆಗಳಿಗೆ ಅನುವಾದಿತ ಕೃತಿಯನ್ನು ಪಾವ್ಲೋ ಕೊಯೆಲೋ ರಚಿಸಿದ್ದಾಖಎ. ಕನ್ನಡಕ್ಕೆ ಶಿವಾನಂದ ಬೇಕಲ್ ಅವರು ಅನುವಾದಿಸಿದ್ದಾರೆ ಎಂದರು.ಸಾರ್ಥಕ ಸಾಧಕ ಬದುಕಿಗೆ ಬೇಕಾದ ಪ್ರೇರಣೆಯ ಕತೆ.ಸ್ಪೇನ್ ದೇಶದ ಸ್ಯಾಂಟಿಯಾಗೋ ನಿಧಿ ಅರಸುತ್ತ ಪ್ರಪಂಚದ ಪರ್ಯಟನೆ ಮಾಡಿದರೂ ಕೊನೆಗೆ ತನ್ನೂರಿನಲ್ಲಿಯೇ ಸುಖ ಕಾಣುವ ತಿರುಳಿನ ಕಾದಂಬರಿ. ಭಾವಪೂರ್ಣವಾಗಿ ನಿರರ್ಗಳ ಕಥಾನಿರೂಪಣೆಯೊಂದಿಗೆ ಶ್ರೀಕಾಂತ ಪತ್ತಾರ ಅವರು ವಿವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿವೃತ್ತ ಮುಖ್ಯಶಿಕ್ಷಕ ಎನ್. ಎಸ್.ಪೂಜಾರಿ ವಹಿಸಿದ್ದರು. ಕನ್ನಡ ಸಂಘದ ಅಧ್ಯಕ್ಷ ಡಾ.ವಿ.ಎಸ್.ಕಾರ್ಚಿ ನಿವೃತ್ತ ಪ್ರಾಚಾರ್ಯ ಜಿ.ಎಸ್. ಘಿವಾರಿ, ನಿವೃತ್ತ ಮುಖ್ಯಶಿಕ್ಷಕ ಸಿ.ಎಮ್.ಹಿರೇಮಠ ವೇದಿಕೆಯಲ್ಲಿದ್ದರು. ಅಪ್ಪಾಸಾಹೇಬಗೌಡ ಮೂಲಿಮನಿ ನಿರ್ವಹಿಸಿದರು. ಬಿ.ಬಿ.ಚೋಕಾವಿ ವಂದಿಸಿದರು.

# ಶಿಕ್ಷಕರ ಕೌಶಲ್ಯ ವೃದ್ಧಿಗೆ ತರಬೇತಿ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ :ಕುಂಟೋಜಿ ಶಿಕ್ಷಕರ ವೃತ್ತಿಪರ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿ ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಕುಂಟೋ–ಜಿಯ ಶ್ರೀ ಘನಮಠೇಶ್ವರ ಪಬ್ಲಿಕ್ ಶಾಲೆಯಲ್ಲಿ ವಿಶೇಷ ಶಿಕ್ಷಕರ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.ಈ ಕಾರ್ಯಕ್ರಮವನ್ನು ತುಂಗಲ್ ಪಿಯು ಕಾಲೇಜಿನ ಪ್ರಾಂಶುಪಾಲರಾದ ಸುರೇಶ್ ಹವಾಲ್ದಾರ್ ನಡೆಸಿಕೊಟ್ಟರು. ಪರಿಣಾಮಕಾರಿ ಬೋಧನೆಯ ವಿವಿಧ ಅಂಶಗಳ ಕುರಿತು ಶಿಕ್ಷಕರಿಗೆ ಮಾರ್ಗದರ್ಶನ ನೀಡಿದ ಅವರು, ವಿಷಯ ಕೌಶಲ್ಯ, ತರಗತಿ ನಿರ್ವಹಣೆ ಮತ್ತು ಸಮಯ ನಿರ್ವಹಣೆ ಬಗ್ಗೆ ಸಮಗ್ರ ಮಾಹಿತಿ ಹಂಚಿಕೊಂಡರು.ಶಿಕ್ಷಕರು ಹೊಸ ಹಾಗೂ ಪರಿಣಾಮಕಾರಿ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯ



ವೈಯಕ್ತಿಕ ಅಗತ್ಯಗಳನ್ನು ಅರ್ಥಮಾಡಿಕೊಂಡು ಪಾಠವನ್ನು ಹೆಚ್ಚು ಆಸಕ್ತಿದಾಯಕ ಹಾಗೂ ಸಂವಾದಾತ್ಮಕವಾಗಿಸಬೇಕು ಎಂದು ಅವರು ಸಲಹೆ ನೀಡಿದರು. ತರಗತಿಯಲ್ಲಿ ಶಿಸ್ತು ಕಾಪಾಡುವುದು, ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಮತ್ತು ಬೋಧನಾ ಸಮಯವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಕುರಿತು ಪ್ರಾಯೋಗಿಕ ಸಲಹೆಗಳನ್ನು ನೀಡಿದರು.ಬದಲಾಗುತ್ತಿರುವ ಶಿಕ್ಷಣ ವ್ಯವಸ್ಥೆಗೆ ಅನುಗುಣವಾಗಿ ಶಿಕ್ಷಕರು ತಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ನಿರಂತರವಾಗಿ ಅಭಿವೃದ್ಧಿಪಡಿಸಿಕೊಳ್ಳಬೇಕು ಎಂದು ಸುರೇಶ್ ಹವಾಲ್ದಾರ್ ಒತ್ತಿ ಹೇಳಿದರು. ಈ ತರಬೇತಿ ಕಾರ್ಯಕ್ರಮವು ಶಿಕ್ಷಕರಿಗೆ ಉತ್ತಮ ಮಾರ್ಗದರ್ಶನ ಹಾಗೂ ಪ್ರೇರಣೆಯನ್ನು ನೀಡಿತು.ಈ ಸಂದರ್ಭದಲ್ಲಿ ಶಾಲೆಯ ಅಧ್ಯಕ್ಷರಾದ ಡಾ. ಎಸ್.ಎಂ. ಸಜ್ಜನ, ಕಾರ್ಯದರ್ಶಿ ಶ್ರೀ ವಿವೇಕಾನಂದ ಸಜ್ಜನ ಹಾಗೂ ಶಿಕ್ಷಕರು ಉಪಸ್ಥಿತ–ರಿದ್ದರು. ತರಬೇತಿ ಕಾರ್ಯಕ್ರಮವನ್ನು ಶ್ಲಾಘಿ–ಸಿದ ಅವರು, ತಮ್ಮ ಅಮೂಲ್ಯ ಜ್ಞಾನ ಮತ್ತು ಅನುಭವವನ್ನು ಹಂಚಿಕೊಂಡಿದ್ದಕ್ಕಾಗಿ ಸುರೇಶ್ ಹವಾಲ್ದಾರ್ ಅವರಿಗೆ ಕೃತಜ್ಞತೆ ಸಲ್ಲಿಸಿದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101